ಭಾಷಾ ವಾಹಿನೀ-೧

ಗಾದೆಗಳು (ಭಾವಾರ್ಥದೊಂದಿಗೆ)
ಒಗಟುಗಳು
ತತ್ಸಮ ತದ್ಭವಗಳು
ನುಡಿಗಟ್ಟುಗಳು
ವಿರುದ್ಧ ಪದಗಳು
ಗಾದೆಗಳು (ವಿಸ್ತಾರದೊಂದಿಗೆ)

ಸಂಗ್ರಹಣೆ ಮತ್ತು ನಿರೂಪಣೆ :
ಲಲಿತಾ ಎಸ್. ಮೂರ್ತಿ
ಬಿ.ಎ., ಡಿಪ್ಲೊಮಾ ಇನ್ ಬುಕ್ ಪಬ್ಲಿಷಿಂಗ್
(ಭಾ. ವಿ. ಭವನ ಮುಂಬಯಿ)

ಪ್ರಕಟಣೆ :
" ಅಪರ್ಣಾ "
8ನೇ ಕ್ರಾಸ್, ಆದಿಪಂಪ ರಸ್ತೆ,
ಮೈಸೂರು–570 002

ಭಾಷಾ ವಾಹಿನೀ-೧

ಗಾದೆಗಳು (ಭಾವಾರ್ಥದೊಂದಿಗೆ)

ಒಗಟುಗಳು

ತತ್ಸಮ ತದ್ಭವಗಳು

ನುಡಿಗಟ್ಟುಗಳು

ವಿರುದ್ಧ ಪದಗಳು

ಗಾದೆಗಳು (ವಿಸ್ತಾರದೊಂದಿಗೆ)

ಸಂಗ್ರಹಣೆ ಮತ್ತು ನಿರೂಪಣೆ :

ಲಲಿತಾ ಎಸ್. ಮೂರ್ತಿ

ಬಿ.ಎ. ಡಿಪ್ಲೊಮಾ ಇನ್ ಬುಕ್ ಪಬ್ಲಿಷಿಂಗ್

(ಭಾ. ವಿ. ಭವನ ಮುಂಬಯಿ)

ಪ್ರಕಟಣೆ :

" ಅಪರ್ಣಾ "

8ನೇ ಕ್ರಾಸ್, ಆದಿಪಂಪ ರಸ್ತೆ,

ಮೈಸೂರು–570 002

Bhashaa Vahinee by : Lalita S. Murthy,
'Aparna Arcades' 2799/1-B 8th Cross, V.V. Mohalla,
Mysore-570 002

ಪ್ರಥಮ ಮುದ್ರಣ : ಜನವರಿ 2000

ಹಕ್ಕುಗಳು ಸಂಗ್ರಹಕಾರರು ಹಾಗೂ ಸಂಯೋಜಕರು

ಬೆಲೆ : 15 ರೂ.

ಮುದ್ರಣ :
ಬುಕ್ ಕ್ರಾಫ್ಟ್ಸ್, ಮೈಸೂರು.

ಭಾಷಾ ವಾಹಿನೀ

ಭಾಷೆ : ಮಾನವ ತನ್ನ ಮನಸ್ಸಿನ ಭಾವನೆಗಳನ್ನು ಸಂದರ್ಭಾನುಸಾರ ಮತ್ತೊಬ್ಬರಿಗೆ ಸಾಮಾನ್ಯವಾಗಿ ಅರ್ಥವಾಗುವಂತೆಯೂ, ಕೆಲವೊಮ್ಮೆ ಭಾವ ಭಂಗಿಗಳ ಮೂಲಕವೂ ಹೊರ ಹೊಮ್ಮಿಸುವ ಸಾಂಕೇತಿಕ ಮಾಧ್ಯಮ.

ಭಾಷೆಗಳು ಕಾಲ, ನಾಡು, ಪರಿಸರ ಸಾಮಗ್ರಿ ಮತ್ತು ವಿಶಿಷ್ಟ ಜನ ಸಮೂಹದ ಪರಿಮಿತಿಯಲ್ಲಿ ತನ್ನದೇ ಆದ ಜಾಲವನ್ನು ಹರಡಿ, ಜನರ ಸಾಮಾನ್ಯ ಜ್ಞಾನ ಮತ್ತು ಸಾಪೇಕ್ಷ ಜ್ಞಾನಗಳು ಉಗಮಿಸಿ, ಪ್ರವಹಿಸಿ, ವೃದ್ಧಿಸುವಂತೆ ಮಾಡಿ ಸಮಾಜದಲ್ಲಿ ದೈನಂದಿನ ಚಟುವಟಿಕೆಗಳನ್ನು ಮೂಡಿಸಿ ಓಡಾಡಿಸುತ್ತಿರುತ್ತದೆ.

ಭಾಷೆಗಳ ನಿತ್ಯ ಬಳಕೆಯಲ್ಲಿ ಎರಡು ವಿಧಗಳು ಒಂದು **ಆಡು ಭಾಷೆ** ಎರಡು **ಬರವಣಿಗೆ ಭಾಷೆ**

" ಬರವಣಿಗೆ ಭಾಷೆ " ಮಾಧ್ಯಮದಲ್ಲಿ ವ್ಯವಹಾರ ತನ್ನದೇ ವೈಶಿಷ್ಟ್ಯ ಹೊಂದಿದ್ದು ವ್ಯಾಕರಣ. ಛಂದಸ್ಸು, ಅಲಂಕಾರ ಮುಂತಾದುವುಗಳಿಂದ ಕೂಡಿ ಸಾಕ್ಷರ ಜೀವನದಲ್ಲಿ ವೈಯುಕ್ತಿಕ ಹಾಗೂ ಸಾಮಾಜಿಕ ಜ್ಞಾನಾರ್ಜನೆ ಮತ್ತು ವಿತರಣೆಯಲ್ಲಿ ಸತತ ಪ್ರಭಾವ ಬೀರುತ್ತಾ ಸ್ಪಂದಿಸುತ್ತಿರುತ್ತದೆ.

" ಆಡು ಭಾಷೆ " ಮಾಧ್ಯಮದಲ್ಲಿ ಗಾದೆಗಳು, ನುಡಿಗಟ್ಟು, ಒಗಟು, ಮುಂತಾದವುಗಳು ಸಾಮಾನ್ಯ ಜೀವನದಲ್ಲಿ ನಡೆ ನುಡಿಗಳಲ್ಲಿ ಹಾಸು-ಹೊಕ್ಕಾಗಿ ಸಾಮಾನ್ಯ ಜ್ಞಾನ ಪ್ರಸರಣೆಗೆ ಹಾದಿ ಮೂಸುತ್ತದೆ ಪ್ರವಹಿಸುತ್ತಿರುತ್ತದೆ.

ಈ ದಿಸೆಯಲ್ಲಿ **ಭಾಷಾ ವಾಹಿನೀ** ತನ್ನ ಸರಣಿಯಲ್ಲಿ ಈ ಸೂಕ್ಷ್ಮ ವಿಷಯಗಳನ್ನು ಪರಿಣಿತರ ಆಕರ-ಆಸರೆ ಯೊಂದಿಗೆ ಕಿರುಹೊತ್ತಿಗೆ ರೂಪದ ಮೂಲಕ ಹೊರತರಲು ಇಚ್ಛಿಸುತ್ತದೆ.

ಈ ಸರಣಿಯ ಕಿರುಹೊತ್ತಿಗೆಗಳಲ್ಲಿ ಇರಬಹುದಾದ ಲೋಪದೋಷಗಳನ್ನು ನಮ್ಮ ಗಮನಕ್ಕೆ ತರುವ ಹಾಗೂ ಈ ಹೊತ್ತಿಗೆಗಳ ಉಪಯೋಗವನ್ನು ಹೆಚ್ಚಿಸುವ ಸಲಹೆಗಳಿಗೆ ಸದಾ ಆದ್ಯತೆ ಮತ್ತು ಸ್ವಾಗತ.

ಸಂಯೋಜಕರು

ಭಾಷಾ ವಾಹಿನೀ ಸರಣಿ

ಅತಿ ಆಸೆ ಗತಿಕೇಡು

ಅತಿಯಾದ ಆಸೆಪಟ್ಟರೆ ಇರುವುದನ್ನೂ ಕಳೆದುಕೊಳ್ಳಬೇಕಾಗುವುದು.

ಅತ್ತೂ ಕರೆದೂ ಔತಣಕ್ಕೆ ಹೇಳಿಸಿಕೊಂಡ ಹಾಗೆ

ನಮ್ಮನ್ನು ಕರೆಯದವರನ್ನು ಬೇಡಿಕೊಂಡಾದರೂ ಅವರ ಬಳಿ ಹೋಗುವುದು

ಅತ್ತೆಗೊಂದು ಕಾಲ ಸೊಸೆಗೊಂದು ಕಾಲ

ಪ್ರತಿಯೊಬ್ಬರಿಗೂ ಒಂದೊಂದು ಕಾಲ (ಸಮಯ) ಬಂದೇ ಬರುವುದೆಂದು ಇದರ ಅರ್ಥ.

ಅನಾಥರಿಗೆ ಊರೇ ತಾಯಿ ಬೇಲಿಯೇ ನೆರಳು

ಯಾರೂ ಇಲ್ಲದ ಅನಾಥರಿಗೆ ಊರವರೆಲ್ಲಾ ಸಹಾಯ ಮಾಡುತ್ತಾರೆ ಮಲಗಲು ಯಾವ ನೆರಳಾಡರೂ ಸಿಗುವುದು

ಅಪ್ಪಾಭಟ್ಟರ ಮಗಳಾಗಿ, ತಿಪ್ಪಾಭಟ್ಟರ ಸೊಸೆಯಾಗಿ ಘೃತ ಅಂದರೆ ನಾ ಕಾಣೆನೆ ದೊಡ್ಡಮ್ಮ ಸಗಣಿ

ಏನೂ ಗೊತ್ತಿಲ್ಲದಿದ್ದರೂ ಎಲ್ಲಾ ತಿಳಿದಂತೆ ಬರೀ ಬಡಾಯಿ ಕೊಚ್ಚುವವರು.

ಅರಸನ ಅಂಕೆಯಿಲ್ಲ ದೈವದ ಕಾಟವಿಲ್ಲ

ಹೇಳುವವರು ಕೇಳುವವರು ಯಾರೂ ಇಲ್ಲ.

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಥ ರಾತ್ರೀಲಿ ಕೊಡೆ ಹಿಡಿದನಂತೆ

ಅನಾಯಾಸವಾಗಿ ಹಣಬಂದರೆ ಬೇಡದೆ ಇರುವುದನ್ನೆಲ್ಲಾ ಮಾಡುತ್ತಾರೆ.

ಅಹಂಕಾರಕ್ಕೆ ಉದಾಸೀನವೇ ಮದ್ದು

ಅಹಂಕಾರ ಪಡುವವರನ್ನು ಉದಾಸೀನ ಮಾಡುವುದೇ ಸರಿಯಾದ ರೀತಿ

ಆಕಾಶ ನೋಡಲು ನೂಕು ನುಗ್ಗಲೇ ?

ಎಲ್ಲಾಕಡೆಯೂ, ಎಲ್ಲವೂ ನಿಚ್ಚಳವಾಗಿ ಕಾಣುವಾಗ ಅದನ್ನು ನೋಡಲು ಸ್ಪರ್ಧೆಯಿಂದ ಹೋದ ಹಾಗೆ.

ಆಡಿ ಉಂಡ ಮೈ ಅಟ್ಟು ಉಂಡೀತೇ ?

ಸೋಮಾರಿತನದಿಂದ ಆಟವಾಡಿ ಕೊಂಡಿರುವವರು ಕಷ್ಟಪಟ್ಟು ಕೆಲಸ ಮಾಡುವರೇ ?

ಆತುರಗಾರನಿಗೆ ಬುದ್ಧಿಮಟ್ಟ

ಆತುರದಿಂದ ಸರಿಯಾಗಿ ಆಲೋಚಿಸದೆ ಕೆಲಸ ಮಾಡುವುದರಿಂದ ಯಾವ ಕೆಲಸವೂ ಸರಿಯಾಗುವುದಿಲ್ಲ.

ಆರು ದೋಸೆ ಕೊಟ್ಟರೆ ಅತ್ತೆಕಡೆ ಮೂರು ದೋಸೆ ಕೊಟ್ಟರೆ ಸೊಸೆ ಕಡೆ

ಸಮಯ ಸಾಧಕತನ.

ಆಳಾಗಬಲ್ಲವ ಅರಸಾಗ ಬಲ್ಲ

ಆಳಿನಂತೆ ಕೆಲಸಮಾಡಬಲ್ಲವನು ಅರಸನಂತೆ ಸುಖ ಕಾಣುತ್ತಾನೆ.

ಇಡೀಮುಳುಗಿದವರಿಗೆ ಚಳಿಯೇನು ? ಮಳೆಯೇನು ?

ಪೂರ್ಣವಾಗಿ ಕಷ್ಟದಲ್ಲಿರುವವರಿಗೆ ಮತ್ತೆಯೂ ಕಷ್ಟ ಅಥವಾ ತೊಂದರೆ ಬಂದಾಗ ಹೀಗೆ ಹೇಳಬಹುದು.

ಇದ್ದದ್ದು ಇದ್ದಂತೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದಂತೆ

ನೀಚರ ಬಗ್ಗೆ ನಿಜವನ್ನು ಹೇಳಿದರೆ ಕೋಪಬಂದು ಅವರು ನಿಜ ಹೇಳಿದವರನ್ನು ಹಿಡಿದು ಚಚ್ಚುವಂತೆ.

ಇಬ್ಬರಿದ್ದರೆ ಏಕಾಂತ, ಮೂವರಾದರೆ ಲೋಕಾಂತ

ಇಬ್ಬರಲ್ಲಿ ಮಾತ್ರ ಗುಟ್ಟು ಉಳಿಯುತ್ತದೆ, ಮೂವರು ಸೇರಿದರೆ ಎಲ್ಲವೂ ಎಲ್ಲರಿಗೂ ತಿಳಿಯುತ್ತದೆ.

ಉಂಡವರಿಗೆ ಊಟಕ್ಕಿಡಬೇಡ ಗುಂಡು ಕಲ್ಲಿಗೆ ನೀರೆರೆಯಬೇಡ

ಅವಶ್ಯಕತೆಯಿಲ್ಲದವರಿಗೆ ಸಹಾಯ ಮಾಡಬೇಡ

ಉಂಡೆಲೆ ಎತ್ತೋ ಗುಂಡ ಅಂದರೆ ಉಂಡವರೆಷ್ಟು ಜನ ಅಂದನಂತೆ

ತಮಗೆ ಆವಶ್ಯಕವಲ್ಲದ ವಿವರಗಳನ್ನೆಲಾ ಕೇಳುವುದು.

ಉಪ್ಪು ತಿಂದವನು ನೀರು ಕುಡಿಯಲೇ ಬೇಕು

ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲೇ ಬೇಕು

ಉಪ್ಪಿಟ್ಟವರನ್ನು ಮುಪ್ಪಿನವರೆಗೂ ನೆನೆ

ಊಟಕ್ಕಿಟ್ಟವರನ್ನು ಬದುಕಿರುವವರೆಗೂ ನೆನೆಯಬೇಕು.

ಊರೆಲ್ಲಾ ಸೂರೆಯಾದ ಮೇಲೆ ಕೋಟೆ ಬಾಗಿಲು ಹಾಕಿದಂತೆ

ಊರನ್ನೆಲ್ಲಾ ಖಾಲಿ ಮಾಡಿದ ಮೇಲೆ ಊರ ಬಾಗಿಲು ಹಾಕವುದೇಕ್ಕೆ ?

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತೆ

ಯಾರಿಗೆ ಚಿಕಿತ್ಸೆ ಅವಶ್ಯಕವೋ ಅವರನ್ನು ಬಿಟ್ಟು ಸುಲಭವಾಗಿ ಸಿಗುವ ಇನ್ನೊಬ್ಬರಿಗೆ ಕ್ರೂರ ಚಿಕಿತ್ಸೆ ನೀಡುವುದು.

ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟು ಅಂದಂತೆ

ಯಾವುದೇ ವಿಷಯವನ್ನೂ ಸರಿಯಾಗಿ ಯೋಚಿಸದೇ ಆತುರದ ಹೇಳಿಕೆ ಕೊಡುವವರು.

ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತಂತೆ

ಜೊತೆಯಲ್ಲೇ ಇರುವ ಪರಸ್ಪರ ವಿರುದ್ಧ ಗುಣ ಸ್ವಭಾವವುಳ್ಳವರು.

ಎರಡು ಕಣ್ಣು ಕಾದು ದಾಸಯ್ಯ ಕೆಟ್ಟ

ಇಬ್ಬರನ್ನು ನಂಬಿದರೆ ಅವರಿಬ್ಬರೂ ಮೋಸ ಮಾಡಿದಾಗ ನಿರಾಸೆಯಾಗುತ್ತದೆ.

ಎಲ್ಲರ ಮನೆ ದೋಸೆ ತೂತಾದರೆ ನಮ್ಮ ಮನೆಯ ಕಾವಲಿಯೇ ತೂತು

ನಮ್ಮ ಅವಗುಣಗಳನ್ನು ಮರೆತು ಇತರರ ಅವಗುಣಗಳನ್ನು ಎತ್ತಿ ಹೇಳ ಬಾರದು.

ಕತ್ತೆ ಕಿರುಬ ಎಲುಬು ಕೂಡಿ ಹಾಕಿದ ಹಾಗೆ

ಉಪಯೋಗಕ್ಕಿಲ್ಲದ ವಸ್ತುಗಳನ್ನು ಅನವಶ್ಯಕವಾಗಿ ಶೇಖರಿಸುವುದು.

ಕಳ್ಳನಿಗೊಂದು ಪಿಳ್ಳೆ ನೆವ

ಕಳ್ಳತನ ಮಾಡುವಾಗ ಸಿಕ್ಕಿ ಹಾಕಿಕೊಂಡರೆ ಸಣ್ಣ ಸಣ್ಣ ಕಾರಣಗಳನ್ನು ಹೇಳುವುದು.

ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ

ಕಳ್ಳತನ ಮಾಡಿದವರಿಗೆ ಯಾವಾಗಲೂ ಮನಸ್ಸಿನಲ್ಲಿ ಆತಂಕ ಇರುತ್ತದೆ.

ಕಾಟಾಚಾರದ ದೇವರಿಗೆ ಕಾಯಿ ಬಾಳೆಕಾಯಿ

ಇಷ್ಟವಿಲ್ಲದವರಿಗೆ ಉಪಚಾರ ಮಾಡಲು ಸಿಕ್ಕಿದ್ದನ್ನೇ ಉಪಯೋಗಿಸುವುದು.

ಕಾಶಿಗ್ಹೋಗಿ ತೆಂಗಿನ ಓಟೆ ತಂದಂತೆ

ಪದೇ ಪದೇ ಹೋಗಲಾಗದಂಥ ಪವಿತ್ರ ಸ್ಥಳಗಳಿಗೆ ಹೋಗಿ ಬೇಡದ ವಸ್ತುಗಳನ್ನು ತರುವುದು.

ಕುಂಬಳ ಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ

ನಿಜವಾಗಿ ಕಳ್ಳತನ ಮಾಡಿದವನಿಗೆ ಬೇರೆಯಾರಾದರೂ ಕಳ್ಳನ ವಿಷಯ ಮಾತನಾಡಿದಾಗ ತನಗೇ ಇರಬಹುದೆಂದು ಅಳುಕುಂಟಾಗುತ್ತದೆ.

ಕುಂಬಾರನಿಗೆ ಕುರುಎದ್ದ ಹಾಗೆ

ಬಿಡುವಿಲ್ಲದೇ ದುಡಿಯುವವರಿಗೆ ರೋಗದ ಕಡೆಗೂ ಗಮನ ಕೊಡಲು ಆಗುವುದಿಲ್ಲ.

ಕುದುರೆ ಕಂಡರೆ ಕಾಲುನೋವು

ಸಹಾಯ ಮಾಡುವವರು ಯಾರಾದರೂ ಸಿಕ್ಕಿದಕೆ ಏನಾದರೂ ಕಾರಣ ಹೇಳಿ ಅವರಿಂದಲೇ ಸಹಾಯ ಪಡೆಯುವುದು.

ಕುಣಿಯಲಾರದವಳು ನೆಲಡೊಂಕು ಅಂದಳಂತೆ

ಸರಿಯಾಗಿ ಕೆಲಸ ಮಾಡಲು ಬಾರದವರು ಉಪಕರಣಗಳ ಮೇಲೆ ತಪ್ಪು ಹಾಕುವುದು.

ಕೂತು ಉಣ್ಣುವವನಿಗೆ ಕುಡಿಕೆ ಹಣ ಸಾಲದು,

ಶ್ರಮ ಪಡದೆ ಸುಲಭವಾಗಿ ದೊರತ ಹಣವನ್ನು ಬರೀ ಖರ್ಚು ಮಾಡುತ್ತಾ ಬರುವವರಿಗೆ ಹೀಗೆ ಹೇಳುತ್ತಾರೆ.

ಕೆಲಸವಿಲ್ಲದ ಕುಂಬಾರ ಮಗಳ ತಲೆ ತಟ್ಟಿದ

ಕೆಲಸವಿಲ್ಲದವರು ಸುಮ್ಮನೆ ಕೂತು ಬೇರೆಯವರಿಗೆ ಅನವಶ್ಯಕವಾಗಿ ತೊಂದರೆ ಮಾಡುವುದು.

ಕೈ ಕೆಸರಾದರೆ ಬಾಯಿ ಮೊಸರು

ಕಷ್ಟಪಟ್ಟ ಉತ್ತು, ಬಿತ್ತಿ ಮಾಡಿದರೆ ಸುಖವಾಗಿ ತಿಂದುಂಡು ಇರಬಹುದು.

ಕೈಲಾಗದ ಕೋತಿ ಮೈ ಪರಚಿ ಕೊಂಡಂತೆ

ಹೆಚ್ಚಾದ ಕೆಲಸಗಳ ಒತ್ತಡ ತಾಳಲಾರದೇ ಕಿರಿಕಿರಿಗೊಳ್ಳುವುದು.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ

ನಮಗೆಂದು ಬಚ್ಚಿಟ್ಟುಕೊಳ್ಳದೇ ಇತರರಿಗೆ ಸಹಾಯಕರಾಗಿದ್ದರೆ ಅದರ ಫಲ ನಮಗೆ ಬೇರೊಂದು ರೀತಿ ಸಿಗುವುದು.

ಕೊಳಗ ಹಾಲಿಗೆ ಒಂದು ತೊಟ್ಟು ಹುಳಿ ಹಿಂಡಿದ ಹಾಗೆ

ಒಂದೇ ತೊಟ್ಟು ಹುಳಿ ಕೊಳಗ ಹಾಲನ್ನು ಹೇಗೆ ಹಾಳು ಮಾಡುವುದೋ ಹಾಗೆಯೇ ಒಂದೇ ಒಂದು ಸಲ್ಲದ ಮಾತು ಇಡೀ ಜೀವನವನ್ನೇ ಹಾಳು ಮಾಡ ಬಹುದು.

ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರೆಸಿದ ಹಾಗೆ

ಒಬ್ಬರು ತಪ್ಪುಮಾಡಿ ಬೇರೊಬ್ಬರ ಮೇಲೆ ಆ ತಪ್ಪನ್ನು ಹಾಕುವುದು.

ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ

ಯಾವುದನ್ನೂ ವಿವೇಚಿಸದೆ, ಅರ್ಥಮಾಡಿಕೊಳ್ಳದೆ ಇರುವವರ ಮುಂದೆ ಏನು ಹೇಳಿದರೂ ಅರ್ಥವಾಗದು.

ಕೋಪದಲ್ಲಿ ಕೊಯ್ದ ಮೂಗು ತಿರುಗಿ ಬರುವುದೇ ?

ಕೋಪದಿಂದ ಯಾವುದಾದರೂ ಅಕಾರ್ಯ ಮಾಡಿದರೆ ಅದನ್ನು ಸರಿಪಡಿಸ ಲಾಗುವುದಿಲ್ಲ.

ಖಂಡಿತವಾದಿ ಲೋಕ ವಿರೋಧಿ

ನ್ಯಾಯವಾಗಿ ಮಾತನಾಡುವವರು ಯಾವಾಗಲೂ ಇತರರಿಗೆ ವಿರೋಧಿಯಂತೆ ಕಾಣುತ್ತಾರೆ.

ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು

ಗಂಡ ಹೆಂಡತಿ ಜಗಳವಾಡಿಕೊಂಡು ಮಗುವಿನ ಕಡೆ ಗಮನಕೊಡದೆ ಇದ್ದಾಗ ಅದು ಸಣ್ಣಗಾಗುತ್ತದೆ.

ಗತಿಯಿಲ್ಲದ್ದಕ್ಕೆ ಗಂಜಿಯೇ ಪಾವನ

ಏನೂ ಇಲ್ಲದಾಗ ನಮಗೆ ದೊರೆಯುವ ಕಡಿಮೆ ಬೆಲೆಯ ವಸ್ತುಗಳೇ ಆಪ್ಯಾಯಮಾನವಾಗಿರುತ್ತದೆ.

ಗಿಣಿ ಸಾಕಿ ಗಿಡುಗನ ಕೈಗೆ ಕೊಟ್ಟಹಾಗೆ

ಪ್ರೀತಿಯಿಂದ ಸಾಕಿದವರನ್ನು ಕ್ರೂರಿಗಳಾದವರ ಬಳಿ ಕಳಿಸುವುದು.

ಗುಣಕೊಟ್ಟು ಗುಣ ತಗೋ

ನಾವು ಇತರರನ್ನು ಗೌರವಿಸಿದರೆ ಅವರೂ ನಮ್ಮನ್ನು ಗೌರವಿಸುತ್ತಾರೆ.

ಗೂನ ಬದುಕುವ ದಾರಿ ಗೂನನೇ ಬಲ್ಲ

ಅವರವರ ಬದುಕುವ ದಾರಿಯನ್ನು ಅವರವರೇ ಹುಡುಕಿಕೊಂಡಿರುತ್ತಾರೆ.

ಗೆದ್ದೆತ್ತಿನ ಬಾಲ ಹಿಡಿಯುವವರು

ಯಾರಿಂದ ತಮ್ಮ ಕೆಲಸವಾಗುವುದೋ ಅವರ ಹಿಂದೆ ಓಡಾಡುವ ಸ್ವಾರ್ಥಿಗಳಿಗೆ ಹೀಗೆ ಹೇಳುತ್ತಾರೆ.

ಗೋರ್ಕಲ್ಲ ಮೇಲೆ ಮಳೆ ಸುರಿದಹಾಗೆ

ಯಾವುದೇ ಪ್ರತಿಕ್ರಿಯೆ ತೋರದ ಜನಗಳಿಗೆ ಉಪದೇಶಮಾಡಿದ ಹಾಗೆ

ಚಿಕ್ಕಪ್ಪ ತಾನೂ ಇಕ್ಕ, ಭಿಕ್ಷೆಯೂ ಬೇಡಲೀಸ

ಜಿಪುಣತನ, ಸ್ವಪ್ರತಿಷ್ಠೆಗಳಿರುವವರು ಬೇರೆಯವರ ಜೀವನಕ್ಕಿಂತ ಅವರ ಸ್ವಂತ ಪ್ರತಿಷ್ಠೆಗಳಿಗೇ ಹೆಚ್ಚು ಮಹತ್ವಕೊಡುತ್ತಾರೆ.

ಜನ ಮರುಳೋ ಜಾತ್ರೆ ಮರುಳೋ

ಜನಗಳು ಯಾವುದನ್ನಾದರೂ ನಂಬಿ ಅದನ್ನು ಅನುಸರಿಸಿದರೆ ಹೆಚ್ಚು ಹೆಚ್ಚು ಜನರು ಅದನ್ನೇ ಅನುಕರಿಸುತ್ತಾರೆ

ಜೀನಗಳಿಸಿದ ಜಾಣ ತಿಂದ

ಜಿಪುಣನಾದವನು ತಾನೂ ಉಪಯೋಗಿಸದೆ ಪರರಿಗೂ ಕೊಡದೆ ಸಂಗ್ರಹಿಸಿದ್ದನ್ನು ಜಾಣನಾದವನು ಬಳಸಿಕೊಳ್ಳುತ್ತಾನೆ

ತನ್ನ ಎಲೇಲಿ ಕತ್ತೆಸತ್ತು ಬಿದ್ದರೂ ಇನ್ನೊಬ್ಬರ ಎಲೆ ನೊಣ ಹೊಡೆಯುವವರು

ತನ್ನ ತಪ್ಪುಗಳು ಎಷ್ಟೇ ಇದ್ದರೂ ಇನ್ನೊಬ್ಬರ ಸಣ್ಣ ತಪ್ಪುಗಳನ್ನೂ ಎತ್ತಿ ತೋರಿಸುವುದು.

ತಲೆ ಗಟ್ಟಿ ಅಂತ ಕಲ್ಲು ಹಾಯಬಾರದು

ಮಾಡಲಾಗುವುದೆಂದು ಅಪಾಯಕಾರಿಯಾದ ಕೆಲಸ ಮಾಡಬಾರದು.

ತಾನು ಮಾಡುವುದು ಉತ್ತಮ, ಮಗ ಮಾಡುವುದು ಮಧ್ಯಮ, ಆಳು ಮಾಡುವುದು ಹಾಳು

ಯಾವುದೇ ಕೆಲಸವನ್ನಾದರೂ ತಾವೇ ಮಾಡುವುದು ಉತ್ತಮ.

ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ

ತಾಯಿಯ ಸ್ಥಾನಕ್ಕೆ ಹಾಗೂ ಉಪ್ಪಿನ ಬದಲಿಗೆ ಬೇರೆ ಯಾವುದೂ ಇಲ್ಲ.

ತಾಯಿಯಂತೆ ಮಗಳು ನೂಲಿನಂತೆ ಸೀರೆ

ಮಕ್ಕಳು ಯಾವಾಗಲೂ ತಾಯಿಯನ್ನೇ ಹೋಲುತ್ತಾರೆ ಸೀರೆಯು ನೂಲಿನಿಂದಲೇ ಆಗುವುದರಿಂದ ನೂಲಿನ ಗುಣವುಟ್ಟದಂತಿರುತ್ತದೆ.

ತಿಪ್ಪೇ ದೇವರಿಗೆ ಗೊಬ್ಬರದ ಸಾಕ್ಷಿ

ಒಂದೇ ತರಹದವರಲ್ಲಿ ಯಜಮಾನನಿಗೆ ಅವನ ಗುಂಪಿನವರೇ ಸಾಕ್ಷಿ ಹೇಳುತ್ತಾರೆ.

ತೂಕಡಿಸುವವರಿಗೆ ಹಾಸಿಕೊಟ್ಟಹಾಗೆ

ಸೋಮಾರಿತನವುಳ್ಳವರು ಯಾವುದನ್ನು ಬಯಸುತ್ತಾರೋ ಅದರಂತೇ ನಡೆದರೆ ಅವರಿಗೆ ಇನ್ನೂ ಸುಲಭವಾಗುತ್ತದೆ.

ತೊಟ್ಟಿಲನ್ನೂ ತೂಗೋದು ಮಗೂನೂ ಚಿಗುಟೋದು

ಕೆಲವರು ಇಬ್ಬರ ನಡುವೆ ಕಿತಾಪತಿ ಮಾಡುತ್ತಿರುತ್ತಾರೆ.

ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು

ಕೆಟ್ಟವರು ಸಿಕ್ಕಿ ಬಿದ್ದಾಗ ಪ್ರತಿಯೊಬ್ಬರೂ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ದುಡ್ಡಿದ್ದವನೇ ದೊಡ್ಡಪ್ಪ

ದುಡ್ಡಿದ್ದವರು ಏನು ಬೇಕಾದರೂ ಮಾಡಬಹುದು

ದೇಶ ತಿರುಗಬೇಕು ಕೋಶ ಓದಬೇಕು

ಹೆಚ್ಚು ಹೆಚ್ಚು ಓದುವುದರಿಂದ ಹಾಗೂ ದೇಶ ಸುತ್ತಿದಷ್ಟೂ ಸಾಮಾನ್ಯ ಜ್ಞಾನ ಹೆಚ್ಚುತ್ತದೆ.

ನವಿಲು ಕುಣೀತು ಅಂತ ಕೆಂಬೂತ ಪುಕ್ಕ ತೆರೆದುಕೊಂಡಿತಂತೆ

ಹಣ, ಯೋಗ್ಯತೆ, ಇವುಗಳಿರುವವರು ಮಾಡುವಂತೆ, ಅವೇನೂ ಇಲ್ಲದವರು ಅವರನ್ನು ಅನುಕರಿಸಲು ಹೋದರೆ ಅಪಹಾಸ್ಯಕ್ಕೆ ಈಡಾಗುವರು

ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ

ಹಟಮಾರಿ ಹಾಗೂ ಮೊಂಡುತನವುಳ್ಳವರ ಸ್ವಭಾವ ನಾಯಿಬಾಲಕ್ಕೆ ಕಟ್ಟಿದ ದಬ್ಬೆ ಬಿಚ್ಚಿದಾಗ ಮತ್ತೆ ಮತ್ತೆ ಡೊಂಕಾಗುವಂತೆ ಇರುತ್ತದೆ.

ನಾಯಿಗೆ ಹೇಳಿದರೆ ನಾಯಿ ತನ್ನ ಬಾಲಕ್ಕೆ ಹೇಳಿತು

ನಾವು ಬೇರೆಯವರಿಗೆ ಹೇಳಿದ ಕೆಲಸವನ್ನು ಅವರು ಇನ್ನೊಬ್ಬರಿಗೆ ಹೇಳಿದಾಗ ಈ ರೀತಿ ಅರ್ಥ ಬರುತ್ತದೆ.

ನೀಲಿ ಮಾತು ನಿಜವಿಲ್ಲ, ನೀರು ಕಡೆದರೆ ಬೆಣ್ಣೆಯಿಲ್ಲ

ಬಣ್ಣ ಬಣ್ಣದ ಮಾತು ಯಾವಾಗಲೂ ನಿಜವಾಗುವುದಿಲ್ಲ.

ಪಟ್ಟೆ ಸೀರೆ ಕೊಟ್ಟತಪ್ಪಿಗೆ ಮಣೆ ಹೊತ್ತುಕೊಂಡು ತಿರುಗಿದರು

ಕೆಲವರಿಗೆ ಸಾಲವಾಗಿ ಬೆಲೆ ಬಾಳುವ ವಸ್ತುಗಳನ್ನು ಕೊಟ್ಟಾಗ ಆ ವಸ್ತುವನ್ನು ಕಾಪಾಡುವ ಕೆಲಸ ನಮ್ಮದೇ ಆಗಿರುತ್ತೆ.

ಬಡವನ ಕೋಪ ದವಡೆಗೆ ಮೂಲ

ಯಾರೂ ಸಹಾಯಕರಿಲ್ಲದ ಬಡವರು ಕೋಪ ಮಾಡಿಕೊಂಡರೆ ಅವರೇ ಪೆಟ್ಟು ತಿನ್ನಬೇಕಾಗುವುದು.

ಕಾಲ ಹೋಗುತ್ತೆ ಮಾತು ನಿಲ್ಲುತ್ತೆ

ಇತರರಿಗೆ ಬೇಸರವಾಗುವಂತೆ ಆಡಿದ ಮಾತು ಎಷ್ಟು ಕಾಲ ಕಳೆದರೂ ಅವರ ಮನಸ್ಸಿನಲ್ಲಿ ಹಾಗೇ ಇರುತ್ತದೆ.

ಬಡ್ಡಿ ಬಾಯಿಗಂಜೀಯೋ ದೊಡ್ಡೆತ್ತಿನ ಕೊಂಬಿಗಂಜೀಯೋ

ನೋಡಿದೊಡನೆ ಭಯವಾಗುವಂತಿರುವ ಕೊಂಬುಳ್ಳ ಎತ್ತಿನಂತೆಯೇ ಅರಚಿ, ಕಿರುಚಿ ಮಾತನಾಡುವವರನ್ನು ಕಂಡರೆ ಜನರು ಅಂಜಿ ದೂರ ಸರಿಯುತ್ತಾರೆ

ಬರೀ ಮಾತಿನ ಪುಟ್ನಂಜಿ ನಿನ್ಮಾತೆಲ್ಲಾ ಅಪರಂಜಿ

ಒಳ್ಳೆಯ ಮಾತಿನಿಂದ ಮರುಳು ಮಾಡುವ ಯಾವುದೇ ಕೆಲಸಕ್ಕೆ ಬಾರದ ಜನ

ಬಾಯಿದ್ದವರು ಬರದಲ್ಲೂ ಬದುಕಿದರು

ಸರಿಯಾದ ರೀತಿಯಲ್ಲಿ ವಿಚಾರಿಸಿ ತಿಳಿದು ಬದುಕುವವರು ಎಂತಹ ಕಾಲದಲ್ಲೂ ಚೆನ್ನಾಗಿ ಬಾಳುತ್ತಾರೆ.

ಬಾಣಲೆಯಿಂದ ಬೆಂಕಿಗೆ ಹಾರಿದ ಹಾಗೆ

ಸಧ್ಯದ ಪರಿಸ್ಥಿತಿಗಿಂತಲೂ ಕಠಿಣವಾದ ಪರಿಸ್ಥಿತಿ ಒದಗುವುದೆಂದು ತಿಳಿದರೆ ಅನಿಸಬಹುದಾದ ರೀತಿ.

ಬಾಯಲ್ಲಿ ಶರಣಾರ್ಥಿ, ಕಂಕುಳಲ್ಲಿ ದೊಣ್ಣೆ

ಬಾಯಲ್ಲಿ ಒಳ್ಳೆಯ ಮಾತಾಡುತ್ತಾ ಅವರಿಗೇ ಮೋಸ ಮಾಡುವುದು.

ಬೀದೀಲಿ ಹೋಗೋ ಮಾರೀನ ಮನೇಗೆ ಬಂದು ಹೋಗು ಎಂದ ಹಾಗೆ

ನಾವೇ ಬರಮಾಡಿಕೊಳ್ಳುವ ಆಪತ್ತುಗಳು.

ಬೀಸೋ ದೊಣ್ಣೆ ತಪ್ಪಿದರೆ ನೂರು ವರ್ಷ ಆಯುಸ್ಸು

ಆಗುವ ಅನಾಹುತದಿಂದ ಸ್ವಲ್ಪದರಲ್ಲಿ ಪಾರಾದರೆ ಅವರಿಗೆ ಮತ್ತೆ ಪೂರ್ಣಾಯುಸ್ಸು.

ಬೆಂದ ಮನೆಯಲ್ಲಿ ಹಿರಿದದ್ದೇ ಲಾಭ

ಕಷ್ಟದಲ್ಲಿರುವವರಿಂದ ಎಷ್ಟು ಲಾಭವಾದರೆ ಅಷ್ಟನ್ನೇ ಪಡೆಯಲು ನೋಡುವವರನ್ನು ನೋಡಿದಾಗ ಹೀಗನಿಸುವುದು.

ಬೆಟ್ಟಕ್ಕೆ ಕಲ್ಲು ಹೊತ್ತಂತೆ

ಯಾವ ವಸ್ತು ಯಾರಲ್ಲಿ ಸಮೃದ್ಧವಾಗಿರುವುದೋ ಅವರಿಗೆ ಅದೇ ವಸ್ತುವನ್ನೇ ನಾವು ಕಷ್ಟಪಟ್ಟುಕೊಂಡುಹೋಗಿ ಕೊಡುವುದು.

ಬೇಲಿಯೇ ಎದ್ದು ಹೊಲ ಮೇಯ್ದಂತೆ

ಕಾಪಾಡುವವರೇ ಅನ್ಯಾಯ ಮಾಡಿದಾಗ ಈ ಗಾದೆಯ ನೆನಪಾಗುವುದು.

ಮಂಗನ ಕೈಲಿ ಮಾಣಿಕ್ಯ ಕೊಟ್ಟ ಹಾಗೆ

ಬೆಲೆ ಬಾಳುವ ವಸ್ತುವನ್ನು ಅದರ ಬೆಲೆ ತಿಳಿಯದವರ ಕೈಲಿ ಕೊಟ್ಟಾಗ ಈ ಗಾದೆಯನ್ನು ಹೇಳುತ್ತಾರೆ.

ಮನಸ್ಸಿದ್ದರೆ ಮಾರ್ಗ

ಮನಸ್ಸಿದ್ದರೆ ಏನೇ ಅಡೆ ತಡೆಗಳು ಬಂದರೂ ಅಂದು ಕೊಂಡ ಕೆಲಸಗಳನ್ನು ಬಿಡದೆ ಮಾಡಬಹುದು.

ಮನಸ್ಸಿನಲ್ಲಿಲ್ಲದ ಮೋಹ ತಿಣುಕಿದರೆ ಬಂದೀತೇ ?

ಯಾರಾದರೊಬ್ಬರ ಬಗ್ಗೆ ನಮ್ಮ ಮನಸ್ಸಿನಲ್ಲಿ ಪ್ರೀತಿಯಿರದಿದ್ದರೆ ಅದನ್ನು ಕಷ್ಟಪಟ್ಟು ಬರಿಸಿಕೊಳ್ಳಲು ಆಗುವುದಿಲ್ಲ.

ಮನೆಗೆ ಮಾರಿ ಪರರಿಗೆ ಉಪಕಾರಿ

ಬೇರೆಯವರ ಹೊಗಳಿಕೆಗೆ ಮರುಳಾಗಿ ಮನೆಯ ಕೆಲಸಗಳನ್ನು ಬಿಟ್ಟು ಇತರರಿಗೆ ಸಹಾಯ ಮಾಡುವುದು.

ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು

ದುಡಿಕಿ ಮಾತನಾಡಿದ ನಂತರ ಅದರ ಪರಿಣಾಮ ಕೆಟ್ಟದ್ದಾದರೆ ಆ ಮಾತನ್ನು ವಾಪಸ್ ತೆಗೆದುಕೊಳ್ಳಲಾಗುವುದಿಲ್ಲ. ಹಾಗೆಯೇ ಒಡೆದ ಮುತ್ತನ್ನು ಜೋಡಿಸಲೂ ಆಗುವುದಿಲ್ಲ.

ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ

ಯಾವ ರೀತಿ ಮಾತನಾಡಬೇಕೆಂದು ತಿಳಿದವನಿಗೆ ಜಗಳ ಮಾಡುವ ಪ್ರಮೇಯವೇ ಇರುವುದಿಲ್ಲ. ಅದೇ ರೀತಿ ಊಟ ಮಾಡಲು ಬಲ್ಲವನು ರೋಗದಿಂದ ನರಳುವುದು ತಪ್ಪುತ್ತದೆ.

ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು

ಕೆಲಸ ಕಾರ್ಯಗಳನ್ನೆಲ್ಲಾ ಕಡೆಗಣಿಸಿ ಮಾತನಾಡುವವರಿಂದ ಮನೆಗೆ ಹಾನಿಯು ಪಾತ್ರೆಯಲ್ಲಿನ ತೂತು ಒಲೆಯನ್ನೆ ಆರಿಸಿ ಬಿಡುವಂತೆ ಆಗುತ್ತದೆ.

ಮಾತು ಮಾತಿಗೂ ಅಳುವ ಗಂಡಸನ್ನು ನಂಬಬೇಡ ಮಾತು ಮಾತಿಗೂ ನಗುವ ಹೆಂಗಸನ್ನು ನಂಬಬೇಡ

ಅಸಹಜವಾದ ನಟನೆಯಿಂದ ಕೂಡಿದ ಗುಣವುಳ್ಳವರನ್ನು ನಂಬಬಾರದು.

ಮಾತ್ಗಂಟೆ ಮನೆ ಹತ್ತಿತು ಅಂದರೆ ನಿಂತುಬೇಯಲಿ, ಕುಂತು ಬೇಯಲಿ, ನಿಧಾನವಾಗಿ ಬೇಯಲಿ ಮಾತೊಂದಿದ್ದರೆ ಮರದ ಕೆಳಗಾದೂರ ಅಟ್ಟು ಉಂಡೇನು ಅಂದಳಂತೆ

ಯಾವಾಗಲೂ ಬರೀ ಮಾತನಾಡುವವರು ಎಲ್ಲವನ್ನೂ ಮರೆತು ಮಾತ ನಾಡುತ್ತಲೇ ಇರುತ್ತಾರೆ.

ಮುಖನೋಡಿ ಮಣೆ ಹಾಕು

ಜನಗಳ ಅಂತಸ್ತನ್ನು ನೋಡಿ ಪ್ರತಿಯೊಬ್ಬರಿಗೂ ಬೇರೆ, ಬೇರೆ ತರಹದ ಆತಿಥ್ಯ ನೀಡುವುದಕ್ಕೆ ಹೀಗೆ ಹೇಳುತ್ತಾರೆ.

ಮೊಮ್ಮಗಳು ಅಜ್ಜಿಗೆ ಕೆಮ್ಮು ಕಲಿಸಿದಂತೆ

ಅನುಭವ ಇರುವವರಿಗೆ ಅನುಭವವಿಲ್ಲದವರು ಹೇಳಿಕೊಡುವುದು.

ರಾತ್ರಿ ಬೆಳಗೂ ರಾಮಾಯಣಕೇಳಿ ರಾಮಂಗೂ ಸೀತೆಗೂ ಏನಾಗಬೇಕು ಎಂದು ಕೇಳಿದರಂತೆ

ಯಾವುದನ್ನೂ ಗಮನಿಸಿ ತಿಳಿದುಕೊಳ್ಳದೇ ಇರುವುದು.

ರಾವಣಾಸುರನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ

ಭಾರಿ ಗಾತ್ರದವರಿಗೆ ಬಹಳ ಸ್ವಲ್ಪ ಆಹಾರ ಕೊಡುವುದು.

ರೋಗಿ ಬಯಸಿದ್ದೂ ಹಾಲು ಅನ್ನ ವೈದ್ಯ ಹೇಳಿದ್ದು ಹಾಲು ಅನ್ನ

ನಾವು ಬಯಸಿದ್ದೇ ದೊರೆಯುವುದು.

ಲಾಲಿಸಿದ ಕಡೆ ಮಕ್ಕಳು ಪೂಜಿಸಿದ ಕಡೆ ದೇವರು

ಪ್ರೀತಿಯಿಂದ ನೋಡಿಕೊಂಡವರ ಬಳಿ ಮಾತ್ರ ಮಕ್ಕಳು ಬರುತ್ತಾರೆ ಹಾಗೆಯೇ ದೇವರನ್ನು ಪೂಜಿಸುವ ಕಡೆ ಮಾತ್ರ ದೇವರು ಇರುತ್ತಾನೆ

ಶೆಟ್ಟಿತ್ರಾಣವೋ ಸರಕಿನ ತ್ರಾಣವೋ

ವಸ್ತುಗಳು ಹೇಗಿದ್ದರೂ ಅದನ್ನು ಮಾರುವ ವ್ಯಾಪಾರಿಯ ಬುದ್ಧಿವಂತಿಕೆಗನು ಸಾರವಾಗಿ ಮಾರಾಟವಾಗುತ್ತವೆ.

ಸಂತೆ ಹೊತ್ತಿಗೆ ಮೂರು ಮೊಳ ನೇಯ್ದ ಹಾಗೆ

ಯಾವುದಾದರೂ ಸಮಾರಂಭ, ಪರೀಕ್ಷೆ ಮೊದಲಾದವುಗಳಿಗಾಗಿ ಆತುರಾತುರ ವಾಗಿ ಸ್ವಲ್ಪವೇ ತಯಾರಾಗುವುದು.

ಸಂಸಾರ ಗುಟ್ಟು ವ್ಯಾಧಿ ರಟ್ಟು

ಮನೆಯಲ್ಲಿನ ಮನಸ್ತಾಪಗಳು, ವಿರಸಗಳನ್ನು ಎಲ್ಲರಲ್ಲಿಯೂ ಹೇಳಬಾರದು ರೋಗದ ಬಗ್ಗೆ ಮಾತ್ರ ಎಲ್ಲರಲ್ಲಿ ಹೇಳಿದಾಗ ಯಾರಿಂದಲಾದರೂ ಪರಿಹಾರ ಸಿಗಬಹುದು.

ಸಗಣಿಯವನೊಡನೆ ಸರಸಕ್ಕಿಂತ ಗಂಧದವನೊಡನೆ ಗುದ್ದಾಟ ಲೇಸು

ಕೀಳುತನವರ ಜೊತೆಯಲ್ಲಿ ಸ್ನೇಹದಿಂದಿರುವುದಕ್ಕಿಂತ ಸಜ್ಜನರ ಜೊತೆ ಹೊಡೆದಾಟವೇ ಒಳ್ಳೆಯದು.

ಸಹವಾಸದಿಂದ ಸನ್ಯಾಸಿ ಕೆಟ್ಟ

ದುರಭ್ಯಾಸಗಳಿರದ ಸನ್ಯಾಸಿಯಂತಹವನೊಬ್ಬ ಇತರ ದುರ್ಗುಣದವರೊಡನೆ ಬೆರೆತು ಕೆಟ್ಟ ವಿದ್ಯೆಗಳನ್ನು ಕಲಿಯುವುದು.

ಸಾಯುವವರಿಗೆ ದೇವರಿಲ್ಲ, ಕೆಟ್ಟವರಿಗೆ ನೆಂಟರಿಲ್ಲ

ರೋಗ ವಿಪರೀತ ಉಲ್ಬಣವಾಗಿ ಸಾಯುವ ಸ್ಥಿತಿಯಲ್ಲಿರುವವರನ್ನು ಯಾವುದೇ ವೈದ್ಯನಿರಲಿ, ದೇವರೂ ಸಹ ರಕ್ಷಿಸಲಾರ ಹಾಗೆಯೇ ಬಡತನ, ಕಳಂಕಗಳು ಇತ್ಯಾದಿ ಬಂದಾಗ ನೆಂಟರು ಸಹ ತಿರುಗಿ ನೋಡುವುದಿಲ್ಲ.

ಸೋಮಾರಿತನಕ್ಕೆ ಕೆಲಸ ಹೆಚ್ಚು ಲೋಭಿಗೆ ಖರ್ಚು ಹೆಚ್ಚು

ಕೆಲಸ ಮಾಡಲು ಸೋಮಾರಿತನ ಮಾಡಿದರೆ ಹೆಚ್ಚು ಕೆಲಸ ಮಾಡಬೇಕಾಗುವುದು ಅಂತೆಯೇ ಜಿಪುಣನಿಗೆ ಖರ್ಚು ಹೆಚ್ಚಾಗುವುದು.

ಹನುಮಂತರಾಯ ಹಗ್ಗ ಕಡಿಯುವಾಗ ಪೂಜಾರಿ ಶಾವಿಗೆ ಬೇಡಿದನಂತೆ

ಯಜಮಾನನಿಗೇ ತಿನ್ನಲು ಏನೂ ಇಲ್ಲದಾಗ ಇತರರು ಭಕ್ಷ್ಯಭೋಜ್ಯವನ್ನು ಕೇಳಿದಂತೆ.

ಹಲ್ಲಿದ್ದರೆ ಕಡಲೆಇಲ್ಲ, ಕಡಲೆಯಿದ್ದರೆ ಹಲ್ಲಿಲ್ಲ

ದುಡ್ಡಿದ್ದವರಿಗೆ ತಿನ್ನಲಾಗುವುದಿಲ್ಲ ಬಡವರಿಗೆ ತಿನ್ನಲು ಏನೂ ಇರುವುದಿಲ್ಲ.

ಹಾಡ್ತಾ ಹಾಡ್ತಾ ರಾಗ ಉಗುಳ್ತಾ ಉಗುಳ್ತಾ ರೋಗ

ಕೆಟ್ಟದಾಗಲೀ ಒಳ್ಳೆಯದಾಗಲೀ ಯಾವುದೇ ಕೆಲಸವಾದರೂ ಮಾಡುತ್ತಲೇ ಇದ್ದರೆ ಅದರಲ್ಲಿ ಪರಿಣತಿ ಪಡೆಯಬಹುದು.

ಹಾಸಿಗೆ ಇದ್ದಷ್ಟು ಕಾಲು ಚಾಚು

ಆದಾಯಕ್ಕೆ ಸರಿಯಾಗಿ ಜೀವನವನ್ನು ಹೊಂದಿಸಿಕೊಂಡು ಬಾಳಬೇಕು.

ಹಾವಿಗೆ ಹಾಲೆರೆದ ಹಾಗೆ

ಕೆಟ್ಟವರಿಗೆ ಸಹಾಯ ಮಾಡಿದ ಹಾಗೆ

ಹಾವೂ ಸಾಯಬಾರದು, ಕೋಲೂ ಮುರಿಯಬಾರದು

ಶಿಕ್ಷೆ ಕೊಟ್ಟಂತೆಯೂ ಇರಬೇಕು ತನಗೂ ಏನೂ ನಷ್ಟವಾಗಬಾರದು.

ಹಿಂದಕ್ಕೆ ತಪ್ಪು, ಮುಂದಕ್ಕೆ ಬುದ್ಧಿ

ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದೆ ಆ ತಪ್ಪುಗಳನ್ನು ಮಾಡದೆ ಇರುವುದು.

ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ

ಮನೆಯಲ್ಲಿನ ಹಿರಿಯರನ್ನೇ ಕಿರಿಯವರು ಅನುಸರಿಸುತ್ತಾರೆ.

ಹುಟ್ಟುತ್ತಾ ಹುಲ್ಲೆ ಮರಿ ಬೆಳೆಯುತ್ತಾ ಕತ್ತೆ ಮರಿ

ಮಗುವಾಗಿದ್ದಾಗ ಮುದ್ದಾಗಿದ್ದದು ಬೆಳೆಯುತ್ತಾ ಮೂರ್ಖನಂತಾಗುವುದು.

ಹುಲಿಗೆ ತನ್ನ ಕಾಡೇನು? ಪರರ ಕಾಡೇನು?

ಇನ್ನೊಬ್ಬರನ್ನು ಸುಲಿದು ಬದುಕುವ ಹುಲಿಯಂತಹವರು ಯಾರನ್ನೂ ಬಿಡದೆ ಹಿಂಸಿಸಿ ಬದುಕುತ್ತಾರೆ.

ಹೆಗ್ಗಣ ಪರದೇಶಕ್ಕೆ ಹೋದರೂ ನೆಲ ಕೆರೆಯೋದು ತಪ್ಪದು

ಒಂದೇ ರೀತಿಯ ಉದ್ಯೋಗ ತಿಳಿದಿರುವವರು ಎಲ್ಲಿ ಹೋದರೂ ಅದನ್ನು ಮಾತ್ರವೇ ಮಾಡಲು ಸಾಧ್ಯ.

ಹೇಳಿಕೊಟ್ಟ ವಿದ್ಯೆ ಮನೆತನಕ ಕಲಿತ ವಿದ್ಯೆ ಕಡೆ ತನಕ

ಹೇಳಿ ಕೊಟ್ಟ ವಿದ್ಯೆ ಮರೆತು ಹೋಗಬಹುದು ಆದರೆ ಕ್ರಮವಾಗಿ ಮನನ ಮಾಡಿಕೊಂಡು ಕಲಿತ ವಿದ್ಯೆ ಕಡೆಯವರೆಗೂ ಮರೆಯದು.

ಹೊಸ ನೀರು ಬಂದು ಹಳೇ ನೀರು ಕೊಚ್ಚಿಕೊಂಡು ಹೋದ ಹಾಗೆ

ಹೊಸಬರು ಬಂದ ಹಾಗೆಲ್ಲ ಹಳಬರ ಹೆಸರು ಕಡಿಮೆಯಾಗುತ್ತಾ ಹೋಗುವುದು

ಒಗಟುಗಳು

೧ ಅಕ್ಕ ಅಕ್ಕ ಗಿಡ ನೋಡು, ಗಿಡದತುಂಬ ಜಡೆ ನೋಡು ಜಡೆ ಬಿಚ್ಚಿ ವಾಸನೆ ನೋಡು

೨ ಅಂಕು ಡೊಂಕಿನ ಬಾವಿ ನಾರಾಯಣ ಕಟ್ಟಿದ ಬಾವಿ ಇಣುಕಿ ನೋಡಿದರೆ ತುಸುವೂ ನೀರಿಲ್ಲ

೩ ಅಂಕು ಡೊಂಕು “ಅ” ನಾಕು ಚೌಕ “ಬೆ”
ಅದರ ತಮ್ಮ “ಸಾ” ಕರಿಗುಡ್ಡ “ವೆ”

೪ ಅಂಗಡಿಯಿಂದ ತರೋದು ಮುಂದಿಟ್ಕೊಂಡಳೋದು

೫ ಅಂಗಣ್ಣ ಮಂಗಣ್ಣ ಅಂಗಿ ಬಿಚ್ಕೊಂಡು ನುಂಗಣ್ಣ

೬ ಅಂಗೈ ಅಗಲದ ಗದ್ದೆ, ಗದ್ದೆಗೆ ನೀರು, ನೀರಿಗೆ ಬೇರು, ಬೇರಿಗೆ ಬೆಂಕಿ

೭ ಅಟ್ಟದ ಮೇಲೆ ಪುಟ್ಟ ಲಕ್ಷ್ಮಿ

೮ ಅಡ್ಡ ಕೊಯ್ದರೆ ಚಕ್ರವಲ್ಲ, ಉದ್ದ ಕೊಯ್ದರೆ ಶಂಖವಲ್ಲ ಮೂಸಿದರೆ ವಾಸನೆ, ಬಿಡಿಸಿದರೆ ಹತ್ತಿಪ್ಪತ್ತು

೯ ಅಮ್ಮನ ಹಾಸಿಗೆ ಸುತ್ತೋಕಾಗಲ್ಲ ಅಪ್ಪನ ದುಡ್ಡು ಎಣಿಸೋಕಾಗಲ್ಲ

೧೦ ಉದ್ದುದ್ದವನೇ ಉರಿ ಮುಖದವನೇ ಸುದ್ದಿ ಹೇಳೋ ಸೂಳೇಮಗನೆ

೧೧ ಊರೆಲ್ಲಾ ಸುತ್ತುತ್ತೆ ಮೂಲೇಲಿ ಬಂದು ನಿಲ್ಲುತ್ತೆ

೧೨ ಒಳಕೋಟೆ ಹೊರಕೋಟೆ ದುರ್ಗತಾನಲ್ಲ ಒಳ ನಾರು ಹೊರ ನಾರು ತೆಂಗುತಾನಲ್ಲ ಒಳಗೆ ಇರುವಾ ಹರಳು ಮಾಣಿಕ್ಯವಲ್ಲ

೧೩ ಒಂದು ರುಮಾಲು ನಮ್ಮಪ್ಪನೂ ಸುತ್ತಲಾರ ನಿಮ್ಮಪ್ಪನೂ ಸುತ್ತಲಾರ

೧೪ ಒಂದು ಹೊರ ರುಚಿ, ಒಂದು ಒಳ ರುಚಿ, ಒಂದು ಮೈಯೆಲ್ಲಾ ರುಚಿ

೧೫ ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ ಮಲ್ಲಿಕಾರ್ಜುನನ
ಶಿಖರಕ್ಕೆ ಬೆಳಕಾಗಿ ಬಲ್ಲವರು ಹೇಳಿ ಸರ್ವಜ್ಞ

೧೬ ಗಿಡ್ಡಿ ಗುದ್ದಿದರೆ ಮನೆಯೆಲ್ಲಾ ಮಕ್ಕಳು

೧೭ ಚಿಕ್ಕ ಮನೆಗೆ ಚಿನ್ನದ ಬೀಗ

೧೮ ಚಿನ್ನದ ಕರಡಿಗೇಲಿ ಬೆಳ್ಳಿ ಲಿಂಗ

೧೯ ಚಿನ್ನದ ಗಿಣಿ ಬಾಲದಲ್ಲಿ ನೀರು ಕುಡಿಯುತ್ತೆ

೨೦ ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ
ಮೂರು ಕಣ್ಣುಂಟು ಹರನಲ್ಲ

೨೧ ಚೋಟುದ್ದ ಹುಡುಗನಿಗೆ ಮಾರುದ್ದ ಬಾಲ

೨೨ ಜಗಳವಿಲ್ಲ, ಕದನವಿಲ್ಲ, ಹೊಡೀತಾನೆ ಬಡೀತಾನೆ

೨೩ ಕಾವಿ ಕಮಂಡಲ ಧರಿಸಿದೋರ್ಯಾರು, ಮೂರು ತಿಂಗಳು
ಭೂಮಿಲಿದ್ದೋರ್ಯಾರು, ಗುದ್ದಪ್ಪನವರು ಎಬ್ಬಿಸಿದೋರ್ಯಾರು ?

೨೪ ತಾಯಿ ತರಕಲಿ, ಮಗಳು ಬೋಡಿ, ಮೊಮ್ಮಗಳು ನುಣ್ಣಗೆ

೨೫ ತೇರು ಎಳೀತಿದೆ, ಹೂಬೀಳ್ತಿದೆ

೨೬ ನಾರಿ ಸೀರೆಯನುಟ್ಟು ನಲಿದಾಡುತಿಹಳು ನೀರ ಕೊಡಗಳ ಹೊತ್ತು
ತಾ ಮೆರೆಯುತಿಹಳು ನೋಡಿದವರ ಮನಕೆ ಬಲು ತಂಪನೀವಳು
ಬೇಡಿದವರಿಗೆ ಸಿಹಿ ನೀರ ತಾ ಕೊಡುವಳು

೨೭ ನೀರಲ್ಲೇ ಹುಟ್ಟುತ್ತೆ ನೀರು ತಾಕಿದರೆ ಸಾಯುತ್ತೆ

೨೮ ಬೆಳಿಗ್ಗೆ ನಾಲ್ಕುಕಾಲು ಮಧ್ಯಾಹ್ನ ಎರಡುಕಾಲು ಸಂಜೆ ಮೂರು ಕಾಲು
ಈ ಪ್ರಾಣಿ ಯಾವುದು

೨೯ ಮನೆ ಎಲ್ಲಾ ಸುತ್ತುತ್ತೆ ಮೂಲೇಲಿ ಬಂದು ನಿಲ್ಲುತ್ತೆ

೩೦ ಮನೇಲಿದ್ರೆ ಲಿಂಗಾಕಾರ, ಹೊರಗೆ ಬಂದರೆ ಚಕ್ರಾಕಾರ
ಇಲ್ಲೂ ಬಂದ್ಯಾ ಜಡೆ ಶಂಕರ

೩೧ ಮರದೊಳಗೆ ಮರಹುಟ್ಟಿ ವಿಚಿತ್ರ ಕಾಯಾಗಿ ತಿನ್ನ ಬಾರದಹಣ್ಣು
ಬಹು ರುಚೀ,

೩೨ ಮೂವರು ಅಕ್ಕತಂಗೀರು ನೀರಲ್ಲಿ ಬಿದ್ದಾಗ ಒಬ್ಬಳು ತೇಲ್ತಾಳೆ,
ಒಬ್ಬಳು ಕರಗ್ತಾಳೆ ಒಬ್ಬಳು ಮುಳುಗ್ತಾಳೆ,

೩೩ ಮೂರು ಕಾಲಿನ ಕೋತಿ, ಪಿತ ಪಿತ ಹೇತಿ ನೀನದನ್ನು ತಿಂತಿ

೩೪ ಹಗ್ಗ ಹಾಸಿದೆ ಕೋಣ ಮಲಗಿದೆ

೩೫ ಹತ್ತು ಸಾವಿರ ಕಣ್ಣು ನೆತ್ತಿಲಾದರೂ ಬಾಲ ಹುತ್ತಿನ ಹುಳುವ
ಹಿಡಿವುದತಿಶಯದ ಧರ್ಮ ಇದ ಬಲ್ಲವರು ಹೇಳಿ ಸರ್ವಜ್ಞ

೩೬ ಹಸಿರು ಚಾದರದ ಮೇಲೆ ಮೊಸರು ಚೆಲ್ಲಿದೆ

೩೭ ಹಿಡಿದರೆ ಹಿಡಿತುಂಬ, ಬಿಟ್ಟರೆ ಮನೆತುಂಬ

ಒಗಟುಗಳ ಉತ್ತರ 46ನೇ ಪುಟ ನೋಡಿ

ತತ್ಸಮಗಳು–ತದ್ಭವಗಳು

ಸಂಸ್ಕೃತದಿಂದ ಕನ್ನಡಕ್ಕೆ ಬಂದ ಕೆಲವು ಪದಗಳು ಇದ್ದಂತೆಯೇ ಬಳಸಲ್ಪಡುತ್ತವೆ. ಮತ್ತೆ ಕೆಲವು ಪದಾಂತ್ಯದಲ್ಲಿ ಸ್ವಲ್ಪ ಬದಲಾವಣೆಗೊಂಡು ಬಳಸಲ್ಪಡುತ್ತವೆ. ಇವುಗಳನ್ನು ಸಮಸಂಸ್ಕೃತ ಪದ ಅಥವಾ ತತ್ಸಮ ಪದಗಳೆಂದು ಕರೆಯುತ್ತೇವೆ.

ಉದಾ : ಗೃಹ, ಧರ್ಮ, ಶತೃ, ಸತ್ಯ, ಪಾಠಶಾಲೆ, ವಿದ್ಯುಚ್ಛಕ್ತಿ, ಸೇನಾಧಿಪತಿ, ಸಂವತ್ಸರ ಮುಂತಾದವುಗಳು.

ತದ್ಭವಗಳು

ಸಂಸ್ಕೃತದ ಪದಗಳನ್ನು ಕನ್ನಡದಲ್ಲಿ ಬಳಸುವಾಗ ಸಾಕಷ್ಟು ಬದಲಾವಣೆಗೊಂಡು ಉಪಯೋಗಿಸಲ್ಪಡುವ ಪದಗಳನ್ನು ತದ್ಭವಗಳೆಂದು ಕರೆಯುತ್ತೇವೆ,

ಅ

ಅಂಗಾರ—ಇಂಗಾಲ
ಅಂಗುಷ್ಠ—ಉಂಗುಟ
ಅಂತಃಪುರ—ಅಂತಪುರ
ಅರ್ಕ—ಎಕ್ಕ
ಅಕ್ಷತೆ—ಅಚ್ಚತೆ
ಅಕ್ಷಯ—ಅಚ್ಚಯ
ಅಕ್ಷರ—ಅಚ್ಚರ
ಅಗ್ರ—ಅಗ್ಗ
ಅಗ್ನಿ—ಅಗ್ಗಿ
ಅರ್ಗಲ—ಅಗುಳಿ
ಅರ್ಘ್ಯ—ಅಗ್ಗ
ಅರ್ಚಕ—ಅಚ್ಚಿಗ
ಅಟವಿ—ಅಡವಿ
ಅರ್ಧ—ಅದ್ದ
ಅನ್ಯಾಯ—ಅನ್ನೆಯ
ಅಪ್ಸರ—ಅಚ್ಚರ
ಅಪಸ್ವರ—ಅಪಸರ
ಅಭ್ಯಾಸ—ಅಬ್ಬಸ
ಅಮಾವಾಸ್ಯೆ—ಅಮಾಸೆ
ಅಮೃತ—ಅಮರ್ದು
ಅಲಿಕಾ—ಅಳಿಕೆ
ಅವಸರ—ಓಸರ
ಅಶ್ರದ್ಧೆ—ಅಸಡ್ಡೆ
ಅಶೋಕ—ಅಸುಗೆ

ಆ

ಆಕರ—ಆಗರ
ಆಕಾರ—ಆಗಾರ
ಆಕಾಶ—ಆಗಸ
ಆಜ್ಞಾ—ಆಣೆ
ಆಜ್ಞಾಪನಾ—ಅಪ್ಪಣೆ
ಆತ್ಮ—ಆತುಮ
ಆದಿತ್ಯವಾರ—ಆಯ್ತಾರ
ಆಪೋಶನ—ಆಪೋಚನ
ಆಭಾಸ—ಆಬಾಸ
ಆಮಿಷ—ಆಮಿಸ
ಆಯುಸ್—ಆಯುಸ್ಸು
ಆಯಾಸ—ಆಯಸ
ಆಯುಗ—ಆಯೋಗ
ಆರ್ಯ—ಅಜ್ಜ
ಆರಾಮ—ಅರವೆ
ಆರಂಭ—ಆರಂಬ
ಆಲಸ್ಯ—ಅಳಸ
ಆಲಯ—ಅಳಯ
ಆವಾರ—ಅರ
ಆಶಾ—ಆಸೆ
ಆಶ್ಚರ್ಯ—ಅಚ್ಚರಿ
ಆಶ್ವಯುಜ—ಅಶ್ವೀಜ
ಆಷಾಢ—ಆಸಡ

ಇ

ಇಂದ್ರ—ಇಂದಿರ
ಇಚ್ಛಾ—ಇಚ್ಚೆ
ಇಷ್ಟಿಕಾ—ಇಟ್ಟಿಗೆ
ಇಳಾ—ಇಳೆ

ಈ

ಈಶ—ಈಸ
ಈಶ್ವರ—ಈಸರ

ಉ

ಉಚ್ಛ್ವಾಸ—ಉಚ್ಚ್ವಾಸ
ಉತ್ಕಟ—ಉಗ್ಗಡ
ಉತ್ತಮ—ಉತ್ತುಮ
ಉತ್ಪಾತ—ಉತುಪಾತ
ಉದ್ದೇಶ—ಉದ್ದೇಸ
ಉದ್ಯಮ—ಉದ್ದಿಮೆ
ಉದ್ಗಾರ—ಉಗ್ಗಾರ
ಉದ್ಯಾಪನ—ಉಜ್ಜವಣೆ
ಉದ್ವೇಗ—ಉಬ್ಬೇಗ
ಉದ್ಯೋಗ—ಉಜ್ಜುಗ
ಉಪಾಧ್ಯಾಯ—ಓಜ
ಉಷ್ಟ್ರ—ಒಂಟೆ

ಊ

ಊರ್ಧ್ವ—ಉದ್ದ

ಋ

ಋಣ—ರಿಣ
ಋಷಿ—ರಿಸಿ

ಏ

ಏಕಶರ—ಏಕಸರ

ಐ

ಐಶ್ವರ್ಯ—ಐಸಿರಿ

ಔ

ಔಷಧ—ಔಸದ

ಕ

ಕರ್ಕಶ—ಕಕ್ಕಸ
ಕಟು—ಕಡು
ಕಟಕ—ಕಡಗ
ಕರ್ಣಾಟ—ಕನ್ನಡ
ಕರ್ತೃ—ಕರ್ತ
ಕರ್ತರಿ—ಕತ್ತರಿ
ಕಬಳ—ಕವಳ
ಕರ್ಮಕಾರ—ಕಮ್ಮಾರ
ಕಥಾ—ಕತೆ
ಕಂಥಾ—ಕಂತೆ
ಕನ್ಯಕ—ಕನ್ನಿಕೆ
ಕರ್ಪೂರ—ಕಪ್ಪುರ
ಕಪಿಲಾ—ಕಪಿಲೆ
ಕರಂಡಕಾ—ಕರಡಿಗೆ
ಕಸ್ತೂರಿ—ಕತ್ತುರಿ
ಕ್ಷಪಣ—ಸೆವಣ
ಕಾಚು—ಗಾಜು
ಕಾರ್ಯ—ಕಜ್ಜ
ಕಾವ್ಯ—ಕಬ್ಬ
ಕಾಂಸ್ಯ—ಕಂಚು
ಕಾಷ್ಠ—ಕಡ್ಡಿ
ಕ್ಷಾರ—ಕಾರ
ಕ್ಷೀರ—ಕೀರು
ಕ್ಷೀರಾಗಾರ—ಕೀಲಾರ
ಕೀರ್ತಿ—ಕೀರುತಿ
ಕುಟಿ—ಗುಡಿ
ಕುಮಾರ—ಕುವರ
ಕುಠಾರ—ಕೊಡಲಿ
ಕುಕ್ಷಿ—ಕುಕ್ಕೆ
ಕುಕ್ಕುಟ—ಕೋಳಿ
ಕುದ್ದಾಲ—ಗುದ್ದಲಿ
ಕುಸ್ತುಂಬುರ—ಕೊತ್ತುಂಬರಿ
ಕೂಷ್ಮಾಂಡ—ಕುಂಬಳ
ಕೃಕಚ—ಗರಗಸ
ಕೃಷ್ಣ—ಕಣ್ಣ
ಕ್ರೌಂಚ—ಕೊಂಚೆ
ಕೌಪೀನ—ಕೋವಣ

ಖ

ಖಡ್ಗ—ಕಡುಗ
ಖನಿ—ಗಣಿ

ಗ

ಗಂಗಾ—ಗಂಗೆ
ಗದೆ—ಗಜೆ
ಗರ್ಭ—ಗಬ್ಬ
ಗರ್ವ—ಗರ್ವು
ಗಹನ—ಗಾನ
ಗಾಥಾ—ಗಾದೆ
ಗಾಥೆ—ಗಾಹೆ
ಗುರ್ಜರಿ—ಗುಜ್ಜರಿ

ಗುಪ್ತ—ಗುತ್ತ
ಗುಹಾ—ಗವಿ
ಗೂಢಾಗಾರ—ಗುಡಾರ
ಗೃಹಿಣಿ—ಗೇಹನಿ
ಗೋಧೂಮ—ಗೋದುವೆ
ಗೋಪಾಲ—ಗೋವಳ
ಗೋಷ್ಠಿ—ಗೊಟ್ಟಿ
ಗ್ರಂಥ—ಗ್ರಂತ
ಗ್ರಂಥಿ—ಗಂಟು
ಗ್ರಹಚಾರ—ಗಾಚಾರ
ಗ್ರಾಮರಸ—ಗಾವರಸ
ಗ್ರಾಮೀಣ—ಗಾವಿಲ
ಗ್ರಾಹಕ—ಗಿರಾಕಿ

ಘ

ಘಟಕ—ಗಡಿಗೆ
ಘಟ್ಟ—ಗಟ್ಟ
ಘಂಟಾ—ಗಂಟೆ
ಘೂಕ—ಗೂಗೆ
ಘೋಷಣಾ—ಗೋಸಣೆ

ಚ

ಚಕ ಪಕ್ಷಿ—ಚಕ್ಕವಕ್ಕಿ
ಚತುರ್ಥಿ—ಚೌತಿ
ಚತುರ—ಚದುರ
ಚತುಷ್ಕ—ಚೌಕ
ಚಮ್ಮ—ಸಮ್ಮ
ಚರ್ಮಪಟ್ಟಿಕಾ-ಚಮ್ಮಡಿಗೆ
ಚರು—ಸರು
ಚಂಪಕ—ಸಂಪಿಗೆ
ಚಾಮುಂಡಿ—ಚಾವುಂಡಿ
ಚಿಕಿತ್ಸೆ—ಚಿಕಿಚ್ಚೆ
ಚಿತ್ರ—ಚಿತ್ತಾರ
ಚಿಹ್ನ—ಚಿನ್ನೆ
ಚೀರ—ಸೀರೆ
ಚೂರ್ಣ—ಸುಣ್ಣ

ಛ

ಛತ್ರಿಕಾ—ಸತ್ತಿಗೆ
ಛರಿಕಾ—ಸುರಿಗೆ

ಜ

ಜಟಾ—ಜಡೆ
ಜನ್ಮ—ಜನುಮ
ಜಾತಿ—ಜಾದಿ
ಜೀರಿಕಾ—ಜೀರಿಗೆ
ಜೀವಿತ—ಜೀತ
ಜ್ವರ—ಜರ
ಜ್ಯೋತ್ಸ್ನಾ—ಜೊನ್ನ
ಜ್ಯೋತಿಷ್ಯ—ಜೋಯಿಸ
ಜ್ಞಾನಿ—ಗ್ಯಾನಿ

ಝ

ಝೋಲಿಕಾ—ಜೋಳಿಗೆ

ಡ

ಡಮರುಕ—ಡಮರುಗ

ತ

ತಟ—ದಡ
ತತ್‌ಕ್ಷಣ—ತಕ್ಷಣ
ತಪಸ್ವಿ—ತಪಸಿ
ತಾಂಬೂಲ—ತಂಬುಲ
ತ್ರಾಣ—ತರಣ
ತ್ಯಾಗ—ಚಾಗ
ತ್ರಿಗುಣ—ತಿಗುಣ
ತ್ರಿಪದಿ—ತಿವದಿ
ತುವರಿ—ತೊಗರಿ
ತುಳಸಿ—ತೊಳಚಿ
ತೃತೀಯಾ—ತದಿಗೆ
ತೈಲಿಕಾ—ತೆಲ್ಲಿಗೆ

ದ

ದಂತ—ಜಂತ
ದದ್ರು—ತದ್ದು
ದಂಷ್ಟ್ರಾ—ದಾಡೆ
ದಾಡಿಮ—ದಾಳಿಂಬೆ
ದಾತೃ—ದಾತ
ದಿಶಾ—ದಿಸೆ
ದ್ವಿಗುಣ—ದುಗುಣ
ದ್ವಿತೀಯ—ಬಿದಿಗೆ
ದ್ವಿಶರ—ದುಸರ
ದೀಪಿಕಾ—ದೀವಿಗೆ
ದ್ವೀಪ—ದೀವಿ
ದುಕೂಲ—ದುಗುಲ
ದೂತ—ದೂದ
ದ್ಯೂತ—ಜೂಜು
ದೃಷ್ಟಿ—ದಿಟ್ಟಿ
ದೇವಕುಲ—ದೇಗುಲ
ದೇಶ—ದೇಸ
ದೊತಿ—ದೂದಿ
ದೋಷ—ದೋಸ
ದ್ರೋಣಿ—ದೋಣಿ

ಧ

ಧರ್ಮ—ದಮ್ಮ
ಧ್ವನಿ—ದನಿ
ಧಾನ್ಯ—ದಾಣ
ಧಾರಾ—ದಾರಾ
ಧ್ಯಾನ—ಜಾನ
ಧುರ್ಯ—ದೊರೆ

ನ

ನರ್ತಕಿ—ನಚ್ಚಣಿ
ನವಮಿ—ನಾಮಿ
ನಾಗರಿಕ—ನಾಗರುಕ
ನ್ಯಾಯ—ನೇಯ
ನಿತ್ಯ—ನಿಚ್ಚ
ನಿದ್ರಾ—ನಿದ್ದೆ
ನಿಂದಾ—ನಿಂದೆ
ನಿಯಮ—ನೇಮ
ನಿಶ್ಚಲ—ನಿಚ್ಚಳ
ನೂಪುರ—ನೇವುರ
ನೇತ್ರ—ನೇತಾಳ

ಪ

ಪಂಕ್ತಿ—ಹಂತಿ
ಪಂಜರ—ಹಂದರ
ಪಂಥ—ಹಂತ
ಪಕ್ಷಿ—ಹಕ್ಕಿ
ಪಕ್ಷ—ಪಕ್ಕ
ಪಕ್ವ—ಪಕ್ಕಾ
ಪಟಾಕಿ—ಪಡಣೆ
ಪತ್ತನ—ಪಟ್ಟಣ
ಪತ್ರ—ಪತ್ತ
ಪತ್ರಗ—ಹಡಗ
ಪತ್ರಿಕಾ—ಪತ್ತಿಗೆ
ಪತಿವ್ರತೆ—ಹದಿಬದೆ
ಪದ್ಮ—ಪದುಮ
ಪನಸ—ಹಲಸು
ಪರವಶಾ—ಪರವಸ
ಪರೀಕ್ಷೆ—ಪರಿಕೆ
ಪಲ್ಯಯನ—ಹಲ್ಲಣ
ಪರ್ವ—ಹಬ್ಬ
ಪಶು—ಪಸು
ಪಾದುಕಾ—ಹಾವುಗೆ
ಪಾನೀಯ—ಅಗ್ಗವಣಿ
ಪಿತೃ—ಪಿತ
ಪಿಪ್ಪಲಿ—ಹಿಪ್ಪಲಿ
ಪಿಶುನ—ಹಿಸುಣ
ಪಿಷ್ಟ—ಹಿಟ್ಟು
ಪೀಠಿಕಾ—ಪೀಳಿಗೆ
ಪುಟ—ಪೊಡ
ಪುಸ್ತಕ—ಹೊತ್ತಗೆ
ಪೂರ್ಣ—ಹೂರಣ
ಪೂರಿಕೆ—ಹೂರಿಗೆ
ಪೃಥ್ವಿ—ಪೊಡವಿ
ಪೌರ್ಣಮಿ—ಹುಣ್ಣಿಮೆ
ಪ್ರಕರಣ—ಹಗರಣ
ಪ್ರಗ್ರಹ—ಹಗ್ಗ
ಪ್ರತಿ—ಪಡಿ
ಪ್ರತಿಮೆ—ಪಡಿಮೆ
ಪ್ರತಿಧ್ವನಿ—ಪಡಿದನಿ
ಪ್ರಪಂಚ—ಪರಪಂಚ
ಪ್ರಭಾ—ಹಬೆ
ಪ್ರಸಾದ—ಹಸಾದ
ಪ್ರಸಾಧನ—ಪಸದನ
ಪ್ರಣತಿ—ಹಣತೆ
ಪ್ರಯಾಣ—ಪಯಣ
ಪ್ರಶ್ನಾ—ಪ್ರಶ್ನೆ
ಪ್ರಾಕಾರ—ಪಾಗಾರ
ಪ್ರಾಣ—ಹರಣ
ಪ್ರಾಯ—ಹರೆಯ
ಪ್ರೌಢ—ಪವುಡ
ಫಣಿ—ಪಣಿ
ಫಲಕ—ಹಲಗೆ

ಬ

ಬಿಲ್ವಪತ್ರ—ಬೆಲ್ಲವತ್ತ
ಬೃಹಸ್ಪತಿವಾರ-ಬೇಸ್ತವಾರ
ಬ್ರಹ್ಮ—ಬೊಮ್ಮ
ಬ್ರಾಹ್ಮಣ—ಬರಾಮಣ

ಭ

ಭಕ್ತಿ—ಭಕುತಿ
ಭಗ್ನ—ಬನ್ನ
ಭರ್ತೃ—ಭರ್ತಾರ
ಭಾಂಡಾಗಾರ—ಭಂಡಾರ
ಭಾಷೆ—ಬಾಸೆ
ಭಿಕ್ಷೆ—ಬಿಕ್ಕೆ
ಭುಕ್ತಿ—ಬುತ್ತಿ
ಭೂತಿ—ಬೂದಿ
ಭೂಮಿ—ಬುವಿ
ಭೃಂಗ—ಬಿಂಗ
ಭೃಂಗಾರ—ಬಿಂಗಾರ
ಭೋಜನ—ಬೋನ
ಭ್ರಮಣೆ—ಬವಣೆ

ಮ

ಮಂತ್ರಿ—ಮಯು
ಮರ್ಕಟ—ಮಂಕಡ
ಮಠ—ಮಡ
ಮಠಿಕಾ—ಮಳಿಗೆ
ಮತ್ಸರ—ಮಚ್ಚರ
ಮತ್ಸ್ಯ—ಮಚ್ಚ
ಮರ್ದಲ—ಮದ್ದಳೆ
ಮನುಷ್ಯ—ಮಾನಿಸ
ಮರ್ಯಾದೆ—ಮರಿಯಾದೆ
ಮಯೂರ—ಮೋರ
ಮರೀಚ—ಮೆಣಸು
ಮರುವಕ—ಮರುಗ
ಮಲ್ಲಿಕಾ—ಮಲ್ಲಿಗೆ
ಮಷೀ—ಮಸಿ
ಮಹಾಲಕ್ಷ್ಮಿ—ಮಾಲಕುಮಿ
ಮಹಿಮೆ—ಮೈಮೆ
ಮಾರ್ಜನ—ಮಜ್ಜನ
ಮಾತೃ—ಮಾತಾ
ಮಾಲಾ—ಮಾಲೆ
ಮುಕ್ತಿ—ಮುಕುತಿ
ಮುಖ—ಮೊಗ
ಮುಗ್ಧೆ—ಮುಗುದೆ
ಮುಷ್ಟಿ—ಮುಟ್ಟ
ಮೂಕ—ಮೂಗ
ಮೂರ್ತಿ—ಮೂರುತಿ
ಮೃಗ—ಮಿಗ
ಮೃತ್ತಿಕಾ—ಮೇರ್ತಿಗೆ
ಮೃತ್ಯು—ಮಿತ್ತು
ಮೃದು—ಮೆದು
ಮೇಘ—ಮೇಗ
ಮೌಕ್ತಿಕ—ಮುತ್ತು

ಯ

ಯಂತ್ರ—ಜಂತ್ರ
ಯಕ್ಷಿಣಿ—ಜಕ್ಕಿಣಿ
ಯಜ್ಞ—ಜನ್ನ
ಯತಿ—ಜತಿ
ಯತ್ನ—ಜತನ
ಯಮ—ಜವ
ಯಮಳ—ಜವಳ
ಯಶ—ಜಸ
ಯವನಿಕಾ—ಜವನಿಕೆ
ಯಾತ್ರೆ—ಜಾತ್ರೆ
ಯಾಮ—ಜಾವ
ಯುಕ್ತಿ—ಜುತ್ತಿ
ಯುಗ—ಜುಗ
ಯೋಗಿ—ಜೋಗಿ

ರ

ರಕ್ತ—ರಕುತ
ರಕ್ಷೆ—ರಕ್ಕೆ
ರತ್ನ—ರನ್ನ
ರಾಕ್ಷಸ—ರಕ್ಕಸ
ರಾಜ—ರಾಯ
ರೋಮ—ರೋವ

ಲ

ಲಕ್ಷ—ಲಕ್ಕ
ಲಕ್ಷ್ಮಿ—ಲಕುಮಿ
ಲೇಖನಿ—ಲೆಕ್ಕಣಿ
ಲೇಪ್ಯ—ಲೆಪ್ಪ
ಲೇಶ—ಲೇಸ

ವ

ವಂದ್ಯಾ—ಬಂಜೆ
ವಂಶ—ಬಂಚ
ವಕ್ರ—ವಂಕಿ
ವಚಾ—ಬಜೆ
ವರ್ತಿ—ಬತ್ತಿ
ವರ್ಧಕಿ—ಬಡಗಿ
ವನ—ಬನ
ವರ್ಣ—ಬಣ್ಣ
ವಲಯ—ಬಳೆ
ವಲ್ಲಿ—ಬಳ್ಳಿ
ವಶ—ಬಸ
ವರ್ಷ—ವರುಷ (ಬರಿಸ)
ವಸತಿ—ಬಸದಿ
ವಸಂತ—ಬಸಂತ
ವಾಕ್—ವಾಕ್ಕು
ವಾಚನ—ಬಾಜನ
ವಾಪಿ—ಬಾವಿ
ವಾಲ—ಬಾಲ
ವೀಣಾ—ಬೀಣೆ
ವಿದ್ಯೆ—ಬಿಜ್ಜೆ
ವಿದ್ಯಾಧರ—ಬಿಜ್ಜೋದರ
ವಿಧಿ—ಬಿದಿ
ವಿನಾಯಕ—ಬೆನಕ
ವಿನೋದ—ಬಿನದ
ವಿಜ್ಞಾನ—ಬಿನ್ನಣ
ವಿಜ್ಞಾಪನ—ಬಿನ್ನಹ
ವಿಸ್ತರ—ಬಿತ್ತರ
ವೀಥಿ—ಬೀದಿ
ವೀರ—ಬೀರ
ವೃಂದ—ಬಿಂದ

ವೃತ್ತ—ಬಟ್ಟ
ವೃದ್ಧ—ವಡ್ಡ
ವ್ರಣ—ರಣ
ವೃಷಭ—ಬಸವ
ವೇತ್ರ—ಬೆತ್ತ
ವೇದ—ಬೇಜ
ವೇಷ—ವೇಸ
ವೈದ್ಯ—ಬೆಜ್ಜ
ವೈಶಾಖ—ಬೇಸಿಗೆ
ವ್ಯಂತರ—ಬೆಂತರ
ವ್ಯವಸಾಯ—ಬೇಸಾಯ
ವ್ಯಸನ—ಬೆಸನ
ವ್ಯಾಕುಲ—ಬಾಗುಳ
ವ್ಯಾಪಾರಿ—ಬೇಹಾರಿ
ವ್ಯಾಘ್ರ—ಬಗ್ಗ

ಶ

ಶಂಕಾ—ಸಂಕೆ
ಶಕುನ—ಸಕುನ
ಶಕ್ತಿ—ಶಕುತಿ
ಶರ್ಕರಾ—ಸಕ್ಕರೆ
ಶಬ್ದ—ಸದ್ದು
ಶಯ್ಯಾ—ಸೆಜ್ಜೆ
ಶಶಿ—ಸಸಿ
ಶಷ್ಕುಲಿ—ಚಕ್ಕುಲಿ
ಶಾಂತ—ಸಾಂತ
ಶಾಲಾ—ಶಾಲೆ
ಶಿಲಾ—ಸಿಲೆ
ಶಿಲ್ಪಿಗ—ಚಿಪ್ಪಿಗ
ಶಿಶು—ಸಿಸು
ಶುಂಠಿ—ಸುಂಟಿ
ಶುನಕ—ಸೊಣಗ
ಶುಭ—ಸುಬ
ಶೂದ್ರ—ಸೂದ್ರ
ಶೂನ್ಯ—ಸೊನ್ನೆ
ಶೂಲ—ಸೂಲ
ಶೃಂಖಲಾ—ಸಂಕೋಲೆ
ಶೃಂಗಾರ—ಸಿಂಗಾರ
ಶ್ರದ್ಧಾ—ಸಡ್ಡೆ
ಶ್ರವಣ—ಸವಣ
ಶ್ರೀ—ಸಿರಿ
ಶ್ರೀಖಂಡ—ಸಿರಿಕಂಡ
ಶ್ರೇಷ್ಠಿ—ಶೆಟ್ಟಿ
ಶೇಷ—ಸೇಸೆ
ಶ್ವಾನ—ಸಾನ
ಶ್ಯಾಮ—ಸಾಮ

ಷ

ಷಷ್ಠಿ—ಚಟ್ಟಿ

ಸ

ಸಂತೋಷ—ಸಂತಸ
ಸಂಧ್ಯಾ—ಸಂಜೆ
ಸಂಸ್ಕೃತ—ಸಕ್ಕದ
ಸಂಸ್ಥಾ—ಸಂತೆ
ಸಂಸ್ಥೆ—ಸೌಸ್ಥ
ಸತ್ಯ—ಸಚ್ಚ
ಸತ್ರ—ಛತ್ರ
ಸಸ್ಯ—ಸಸಿ
ಸರಸ್ವತಿ—ಸರಸತಿ
ಸಮೀಪ—ಸನಿಹ
ಸಹಜ—ಸಾಜ
ಸಹನೆ—ಸೈರಣೆ
ಸಹಸ್ರ—ಸಾವಿರ
ಸಾಕ್ಷಿ—ಸಕ್ಕಿ
ಸಿಂಹ—ಸಿಂಗ
ಸಿದ್ಧ—ಸಿದ್ದ
ಸಿಬಿಕಾ—ಸಿವಿಗೆ
ಸುಖ—ಸೊಗ
ಸುಧೆ—ಸೊದೆ
ಸುಭಗ—ಸೊಬಗು
ಸುರಾ—ಸೊರ
ಸುಲಭ—ಸುಲುಬ
ಸೂಚೀ—ಸೂಜಿ
ಸೂತ್ರ—ಸೂಸ್ತ್ರ
ಸೂತ್ರಿಕಾ—ಸುತ್ತಿಗೆ
ಸೂರ್ಯ—ಸೂರಯ
ಸೃಷ್ಟಿ—ಸಿಟ್ಟಿ
ಸ್ನೇಹ—ನೇಹ
ಸ್ನಾನ—ಸಾನ
ಸ್ತಂಭ—ಕಂಬ
ಸ್ಥಾನ—ತಾಣ
ಸ್ಥೂಲ—ತೊಳ
ಸ್ವರ್ಗ—ಸಗ್ಗ
ಸ್ವರ್ಣ—ಸೊನ್ನ
ಸ್ವರ—ಸರ
ಸ್ಪರ್ಶ—ಪರುಷ
ಸ್ವಾಮಿ—ಸಾಮಿ
ಸ್ಫೋಟಕ—ಹೋಳಿಗೆ
ಸ್ಮಶಾನ—ಮಸಣ

ಹ

ಹಂಸ—ಅಂಚೆ
ಹತಿ—ಅತಿ
ಹರಿದ್ರಾ—ಅರಿಶಿನ
ಹರ್ಷ—ಹರುಷ
ಹೃದಯ—ಹೆದೆಯ

ನುಡಿಗಟ್ಟುಗಳು

1. ಅಂಕೆಯಲ್ಲಿಡು—ಹದ್ದುಬಸ್ತಿನಲ್ಲಿಡು
2. ಅಂಗೈನೆಲ್ಲಿಯಂತೆ—ಚೆನ್ನಾಗಿ ಅರಿತಿರುವ
3. ಅಗ್ರ ತಾಂಬೂಲ—ಮೊದಲ ಮರ್ಯಾದೆ
4. ಅಚ್ಚಳಿಯದ—ಹಾಳಾಗದ
5. ಅಜ್ಜ ಹಾಕಿದ ಆಲದ ಮರ—ತಲೆ ಮಾರಿನಿಂದ ಬಂದದ್ದು
6. ಅಜ್ಜಿ ಕತೆ—ಕಟ್ಟು ಕತೆ
7. ಅಡ್ಡಗೋಡೆ ಮೇಲೆ ದೀಪ ಇಡು—ಯಾವುದನ್ನೂ ಸ್ಪಷ್ಟವಾಗಿ ಹೇಳದಿರುವುದು
8. ಅಟ್ಟಕ್ಕೇರಿಸು—ಹೊಗಳಿ ಉಬ್ಬಿಸು
9. ಅರ್ಧ ಚಂದ್ರ ಪ್ರಯೋಗ—ಕುತ್ತಿಗೆ ಹಿಡಿದು ದಬ್ಬು
10. ಅರೆದು ಕುಡಿಸು—ಚೆನ್ನಾಗಿ ಅಭ್ಯಾಸ ಮಾಡಿಸು
11. ಅಳಿಲು ಸೇವೆ—ಭಕ್ತಿಯಿಂದ ಮಾಡಿದಅಲ್ಪ ಸೇವೆ
12. ಅಳೆದೂ ಸುರಿದೂ—ಚೆನ್ನಾಗಿ ಹಿಂದೆ ಮುಂದೆ ಯೋಚಿಸು
13. ಆಕಾಶಕ್ಕೆ ಏಣಿ ಹಾಕು—ಆಗದ ಕೆಲಸಕ್ಕೆ ಕೈ ಹಾಕು
14. ಆಹುತಿಯಾಗು—ಬಲಿಯಾಗು
15. ಇತಿಶ್ರೀ ಹಾಡು—ಮಂಗಳ ಹಾಡು (ಕೊನೆ)
16. ಇಹಲೋಕದ ಯಾತ್ರೆ ಮುಗಿಸು—ಸಾಯುವುದು
17. ಉಕ್ಕಿನ ಕಡಲೆ—ಕಷ್ಟದ ಕೆಲಸ
18. ಉಪ್ಪಿಡುವುದು—ಊಟ ಹಾಕಿ ಕಾಪಾಡುವುದು
19. ಉಪ್ಪುಖಾರ ಹಚ್ಚು—ಇಲ್ಲದ ವಿಷಯ ಸೇರಿಸಿ ಹೇಳು
20. ಉಭಯಸಂಕಟ—ಪೇಚಿನ ಸ್ಥಿತಿ
21. ಉರಿದು ಬೀಳು—ರೇಗಾಡು
22. ಎಡವಿದ ಕಾಲೇ ಎಡವು—ಪದೇ ಪದೇ ತೊಂದರೆಗೊಳಗಾಗು
23. ಎದುರು ಹಾಕಿಕೋ—ವಿರೋಧ ಕಟ್ಟಿಕೋ
24. ಎದೆ ಗೆಡದಿರು—ಧೈರ್ಯ ಗೆಡದಿರು
25. ಎದೆ ಭಾರವಾಗುವುದು—ದುಃಖದಿಂದ ತುಂಬಿದ
26. ಎದೆಯ ಮೇಲಿನ ಭಾರ ಇಳಿಸು—ಜವಾಬ್ದಾರಿ ಕಳೆದುಕೋ
27. ಎದೆಯ ಮೇಲೆ ಕುಳಿತು—ಒತ್ತಡ ಹೇರು
28. ಎರಡು ನಾಲಿಗೆ—ಎರಡೆರಡು ರೀತಿಯ ಹೇಳಿಕೆ ಕೊಡು
29. ಎರಡು ಬಗೆ—ದ್ರೋಹ ಮಾಡು
30. ಎಳ್ಳು ಮೊನೆಯಷ್ಟು—ತೀರ ಕಡಿಮೆ
31. ಎಳ್ಳು ನೀರು ಬಿಡು—ಋಣ ಕಡಿದುಕೋ

32. ಏತಿ ಎಂದರೆ ಪ್ರೇತ ಎನ್ನು—ಹೇಳಿದ ಮಾತಿಗೆಲ್ಲಾ ಪ್ರತಿ ಹೇಳು
33. ಏಳು ಕೆರೆ ನೀರು ಕುಡಿದವ—ಅನುಭವಿ
34. ಒಂಟಿ ಕಾಲಿನ ಮೇಲೆ ನಿಲ್ಲು—ತುದಿಗಾಲಿನಲ್ಲಿ ನಿಂತು ಆತುರದಿಂದ ನಿರೀಕ್ಷಿಸು
35. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ—ಪಕ್ಷಪಾತ ಮಾಡು
36. ಒಡಕು ಬಾಯಿ—ಸುಮ್ಮನೆ ಗೊತ್ತಿದ್ದ, ಗೊತ್ತಿಲ್ಲದ ವಿಷಯವೆಲ್ಲಾ ಇತರರ ಮುಂದೆ ಹೇಳುತ್ತಿರುವುದು
37. ಒಣ ಜಂಬ—ಅಹಂಕಾರ
38. ಒಣ ಜಗಳ—ಕೆಲಸಕ್ಕೆ ಬಾರದ ಜಗಳ
39. ಒಣ ಹರಟೆ—ಉಪಯೋಗವಿಲ್ಲದ ಹರಟೆ
40. ಒರೆಗೆಹಚ್ಚು—ಪರೀಕ್ಷೆ ಮಾಡು
41. ಓಂ ನಾಮ—ಪ್ರಾರಂಭ
42. ಓಬೀರಾಯನಕಾಲ—ಬಹಳ ಹಿಂದಿನ ಕಾಲ
43. ಕಂಕಣ ಬದ್ಧನಾಗು—ವ್ರತ ತೊಟ್ಟು ಮಾಡು
44. ಕಂತೆ ಪುರಾಣ—ಕೆಲಸಕ್ಕೆಬಾರದ ಹರಟೆ
45. ಕಂತೆ ಬಿಚ್ಚು—ಕಟ್ಟು ಕತೆಯೆಲ್ಲ ಸೇರಿಸಿ ಹೇಳು
46. ಕಂಬಿ ಕೀಳು—ಓಡಿ ಹೋಗು
47. ಕಗ್ಗಂಟು—ಬಗೆಹರಿಸಲಾಗದ ಸಮಸ್ಯೆ
48. ಕಟ್ಟಿಟ್ಟ ಬುತ್ತಿ—ಅನುಭವಿಸಲೇಬೇಕಾಗಿರುವುದು
49. ಕಟ್ಟು ಕತೆ—ಸುಳ್ಳು ಮಾತು
50. ಕಣ್ಣಿಗೆ ಮಣ್ಣೆರಚು—ಮೋಸಮಾಡು
51. ಕಣ್ಣೀರಿನಲ್ಲಿ ಕೈ ತೊಳೆ—ಬಹಳ ಕಷ್ಟಪಡು
52. ಕಣ್ತಪ್ಪಿಸು—ಮರೆಯಾಗು
53. ಕಣ್ಣುರಿ—ಅಸೂಯೆ
54. ಕಣ್ಣು ಹಾಯಿಸು—ಸುಮ್ಮನೆ ಕಣ್ಣಾಡಿಸಿ ನೋಡು
55. ಕಣ್ಣೊರೆಸು—ಸಮಾಧಾನಮಾಡು
56. ಕಣ್ಮಣಿ—ಪ್ರೀತಿ ಪಾತ್ರವಾದದ್ದು
57. ಕತ್ತಿಮಸೆ—ಸೇಡಿನಿಂದ ಕೂಡಿರು
58. ಕತ್ತೆ ದುಡಿತ—ವಿಪರೀತ ಕೆಲಸ
59. ಕನಸಿನಗೋಪುರ—ಕೈಗೆಟುಕದ ಆಸೆ
60. ಕಪಿಮುಷ್ಠಿ—ಬಿಗಿ ಹಿಡಿತ
61. ಕಬ್ಬಿಣದ ಕಡಲೆ—ಕಷ್ಟದ ವಿಷಯ

62. ಕಲ್ಲುಹಾಕು—ತೊಂದರೆಮಾಡು
63. ಕಿಡಿಕಾರು—ಸಿಟ್ಟಿಗೇಳು
64. ಕಿವಿ ಕಚ್ಚು—ಚಾಡಿ ಹೇಳು
65. ಕುಡಿದ ನೀರು ಅಲ್ಲಾಡದೆ—ತೊಂದರೆಯಿಲ್ಲದೆ
66. ಕೂಪ ಮಂಡೂಕ—ಬಾವಿಯೊಳಗಿನ ಕಪ್ಪೆಯಂತೆ ಲೋಕಾನುಭವವಿಲ್ಲದ
67. ಕೈ ಕೊಡು—ಮೋಸಮಾಡು
68. ಕೈ ಬಿಸಿ ಮಾಡು—ಲಂಚ ಕೊಡು
69. ಕೈ ಯೊಡ್ಡು—ಬೇಡುವುದು
70. ಕೈ ಹಾಕು—ಸಹಾಯಮಾಡು
71. ಕೊರಳಿಗೆ ಕಟ್ಟು—ಬಲವಂತದಿಂದ ಸ್ವೀಕರಿಸುವಂತೆ ಮಾಡು
72. ಗಗನ ಕುಸುಮ—ಕೈಗೆಟುಕದ
73. ಗತಿ ಕಾಣಿಸು—ಮುಗಿಸು
74. ಗಾಳಿಮಾತು—ಅಸ್ಪಷ್ಟವಾದ ವಾರ್ತೆ
75. ಗೋಣುಚೆಲ್ಲು—ಸಾಯಿ
76. ಚಕಾರವೆತ್ತದ—ಆಕ್ಷೇಪಣೆಯಿಲ್ಲದ
77. ಚಳ್ಳೆಹಣ್ಣು ತಿನ್ನಿಸು—ಮೋಸಮಾಡು
78. ಚಿಟುಕು ಮುಳ್ಳಾಡಿಸು—ಒಂದೇಸಮ ತೊಂದರೆಕೊಡು
79. ಜನ್ಮಜಾಲಾಡು—ಚನ್ನಾಗಿ ಬಯ್ಯಿ
80. ಜುಟ್ಟು ಹಿಡಿ—ಹಿಡಿತಕ್ಕೆ ಸಿಗು
81. ಟೋಪಿ ಹಾಕು—ಮೋಸಮಾಡು
82. ಡುಂಕಿ ಹೊಡೆ—ಅನುತ್ತೀರ್ಣನಾಗು
83. ತಂಪು ಹೊತ್ತಿನಲ್ಲಿ ನೆನೆ—ಕೃತಜ್ಞತೆಯಿಂದ ನೆನೆ
84. ತಣ್ಣೀರೆರಚು—ಉತ್ಸಾಹ ಭಂಗ ಮಾಡು
85. ತಲೆಗೆ ಹತ್ತು—ಅರ್ಥವಾಗು
86. ತಲೆ ತಿನ್ನು—ಕಾಡಿಸು
87. ತಲೆದೂಗು—ಮೆಚ್ಚುಗೆ ಸೂಚಿಸು
88. ತಲೆಯಲ್ಲೇ ನಡೆ—ಅಹಂಕಾರಪಡು
89. ತಲೆಯೊಡ್ಡು—ಜವಾಬ್ದಾರಿ ಹೊರು
90. ತಾಳಕ್ಕೆ ತಕ್ಕಂತೆ ಕುಣಿ—ಹೇಳಿದಂತೆ ಕೇಳು
91. ತಿಪ್ಪೆಸಾರಿಸು-ಮಾಡಿದ ಕೆಟ್ಟ ಕೆಲಸವನ್ನು ಮುಚ್ಚಿಟ್ಟು ಪರಿಶುದ್ಧನಂತೆ ಇರು
92. ತಿರುಗಿಬೀಳು—ವಿರೋಧಿಸು
93. ತಿಲಾಂಜಲಿ ನೀಡು—ಶಾಶ್ವತವಾಗಿ ಋಣ ಕಡಿದುಕೋ
94. ತುಂಬಿದ ಕೊಡ—ಅಹಂಕಾರವಿಲ್ಲದ, ಯೋಗ್ಯತೆಯುಳ್ಳವ

95. ದಾರಿ ದೀಪ—ಮಾರ್ಗ
96. ದ್ರಾವಿಡ ಪ್ರಾಣಾಯಾಮ—ಸುತ್ತುಬಳಸು
97. ಧೂಳೀಪಟಮಾಡು—ನಾಶಮಾಡು
98. ನಡುಕಟ್ಟು—ಸಿದ್ಧವಾಗು
99. ನಡು ನೀರಿನಲ್ಲಿ ಕೈ ಬಿಡು—ಅರ್ಧದಲ್ಲೇ ಬಿಟ್ಟುಬಿಡು
100. ನಾಲಿಗೆ ಹರಿತಮಾಡು—ಚುರುಕು ಮಾತನಾಡು
101. ನೀರಿನಲ್ಲಿ ಹೋಮ ಮಾಡು—ವ್ಯರ್ಥ ಮಾಡು
102. ನೀರು ಕುಡಿಸು—ಹಠ ಸಾಧಿಸು
103. ನೆತ್ತಿಗೇರು—ಅಹಂಕಾರಿಯಾಗು
104. ನೆಲ ಸಮ ಮಾಡು—ಪೂರ್ತಿಯಾಗಿ ನಾಶ ಮಾಡು
105. ನೊಣ ಹೊಡೆ—ಕೆಲಸವಿಲ್ಲದೆ ಇರುವುದು
106. ಪಂಚಪ್ರಾಣ—ಅತಿ ಪ್ರಿಯವಾದ
107. ಪಾಠ ಕಲಿಸು—ಬುದ್ಧಿ ಕಲಿಸು
108. ಪಾಷಾಣ ಹೃದಯ—ಕಲ್ಲು ಮನಸ್ಸು
109. ಪುಸ್ತಕದ ಬದನೇಕಾಯಿ—ಅನುಭವವಿಲ್ಲದೆ ಬರೀ ಓದಿದವನು
110. ಪ್ರಾಣ ಹಿಂಡು—ತೊಂದರೆಕೊಡು
111. ಬಡ ಪೆಟ್ಟಿಗೆ—ಸುಲಭವಾಗಿ
112. ಬಣ್ಣ ಕಟ್ಟು—ಇಲ್ಲದ್ದನ್ನು ಸೇರಿಸು
113. ಬಣ್ಣದ ಚಿಟ್ಟೆ—ಥಳುಕಿನವಳು
114. ಬಣ್ಣ ಬದಲಾಯಿಸು—ಒಂದೊಂದುಸಲ ಒಂದೊಂದು ರೀತಿ ಇರು
115. ಬಣ್ಣ ಬಯಲಾಗು—ರಹಸ್ಯ ಗೊತ್ತಾಗು
116. ಬಲವಂತ ಮಾಘ ಸ್ನಾನ—ಒತ್ತಾಯದ ಕೆಲಸ
117. ಬಲಿಯಾಗು—ನಾಶಕ್ಕೊಳಗಾಗು
118. ಬಾದರಾಯಣ ಸಂಬಂಧ—ಸುತ್ತು ಬಳಸಿನ ಸಂಬಂಧ
119. ಬಾಲಬಿಚ್ಚು—ತುಂಟತನ ಮಾಡು
120. ಬಿಸಿ ನೆತ್ತರು—ಯೌವನ
121. ಬೀದಿರಂಪ—ಎಲ್ಲರಿಗೂ ಗೊತ್ತಾಗು
122. ಬುರುಡೆ ಹೊಡೆ—ಸುಳ್ಳು ಹೇಳು
123. ಬೆಂಕಿಕಾರು—ಅಸೂಯೆ ಪಡು
124. ಬೆಣ್ಣೆ ಹಚ್ಚು—ನಯವಾಗಿ ಹೊಗಳು
125. ಬೆನ್ನಲ್ಲಿ ಇರಿ—ನಂಬಿಕೆ ದ್ರೋಹ ಮಾಡು
126. ಬೆನ್ನು ತಟ್ಟು—ಪ್ರೋತ್ಸಾಹಿಸು

127. ಬೆನ್ನು ತೋರಿಸು—ವಿಮುಖನಾಗು
128. ಭೂಮಿಗೆ ಭಾರ—ಉಪಯೋಗವಿಲ್ಲದ
129. ಮಂಕು ಬೂದಿ ಎರಚು—ಮರುಳು ಮಾಡು
130. ಮಂಗಳಾರತಿ ಎತ್ತು—ಅವಮಾನ ಮಾಡು
131. ಮಣ್ಣು ಪಾಲಾಗು—ಹಾಳಾಗು
132. ಮೀನ ಮೇಷ ಎಣಿಸು—ಹಿಂದೆ ಮುಂದೆ ನೋಡು
133. ಮುಖಕ್ಕೆ ಮಸಿ ಹಚ್ಚು—ಕಳಂಕ ತರು
134. ಮೂಗಿಗೆ ತುಪ್ಪ ಹಚ್ಚು—ಆಸೆ ತೋರಿಸು
135. ಮೈ ಚಳಿ ಬಿಡು—ಸಂಕೋಚ ಬಿಡು
136. ಮೊಲದ ಕೊಂಬು—ಸುಳ್ಳು
137. ಯಾದವೀ ಕಲಹ—ತಮ್ಮ ತಮ್ಮಲೇ ಹೊಡೆದಾಡು
138. ರಕ್ತ ಹೀರು—ಶೋಷಣೆ ಮಾಡು
139. ರೈಲು ಬಿಡು—ಸುಳ್ಳು ಹೇಳು
140. ಸಿಂಹ ಪಾಲು—ದೊಡ್ಡ ಭಾಗ
141. ಸುಗ್ರೀವಾಜ್ಞೆ—ಕಟ್ಟಾಜ್ಞೆ
142. ಸೆರಗೊಡ್ಡಿ ಬೇಡು—ದೈನ್ಯದಿಂದ ಕೇಳು
143. ಸೊಪ್ಪು ಹಾಕು—ಬೆಲೆ ಕೊಡು
144. ಹದ್ದಿನ ಕಣ್ಣು—ತೀಕ್ಷ್ಣ ದೃಷ್ಟಿ
145. ಹಳ್ಳಕ್ಕೆ ಬೀಳು—ಮೋಸ ಹೋಗು
146. ಹಿತ್ತಾಳೆ ಕಿವಿ—ಚಾಡಿ ಮಾತು ಕೇಳುವ ಸ್ವಭಾವ
147. ಹೊಟ್ಟೆ ತಣ್ಣಗಿರಲಿ—ಸುಖವಾಗಿರಲಿ

ವಿರುದ್ಧ ಪದಗಳು

ಅಂಗ × ಅನಂಗ
ಅಂತರಂಗ × ಬಹಿರಂಗ
ಅಕ್ಷರ × ಅನಕ್ಷರ
ಅಗತ್ಯ × ಅನಗತ್ಯ
ಅತಿ × ಅನತಿ
ಅತಿವೃಷ್ಟಿ × ಅನಾವೃಷ್ಟಿ
ಅರ್ಥ × ಅನರ್ಥ
ಅದೃಷ್ಟ × ನತದೃಷ್ಟ
ಅನುಕೂಲ × ಅನಾನುಕೂಲ
ಅನುಪಮ × ಉಪಮ
ಅನುಭವ × ಅನನುಭವ
ಅನ್ಯಾಯ × ನ್ಯಾಯ
ಅಪರಾಧಿ × ನಿರಪರಾಧಿ
ಅಪ್ರಾಪ್ತ × ಪ್ರಾಪ್ತ
ಅಭಿಮಾನ × ನಿರಭಿಮಾನ
ಅಮೃತ × ವಿಷ
ಅಲೌಕಿಕ × ಲೌಕಿಕ
ಅಲ್ಪಾಯು × ದೀರ್ಘಾಯು

ಅವಮಾನ×ಮಾನ
ಅವಶ್ಯ×ಅನವಶ್ಯ
ಅಸಾಧಾರಣ×ಸಾಧಾರಣ
ಅಸುರ×ಸುರ
ಅಸೂಯೆ×ಅನಸೂಯೆ
ಅರ್ಹತೆ×ಅನರ್ಹತೆ

ಆಕರ್ಷಕ×ಅನಾಕರ್ಷಕ
ಆಕರ್ಷಣೆ×ವಿಕರ್ಷಣೆ
ಆಕಾರ×ನಿರಾಕಾರ
ಆಕಾಶ×ಭೂಮಿ
ಆಗಮನ×ನಿರ್ಗಮನ
ಆಚಾರ×ಅನಾಚಾರ
ಆತಂಕ×ನಿರಾತಂಕ
ಆಧಾರ×ನಿರಾಧಾರ
ಆಯಾಸ×ನಿರಾಯಾಸ
ಆರ್ಯ×ಅನಾರ್ಯ
ಆರಂಭ×ಅಂತ್ಯ
ಆರೋಗ್ಯ×ಅನಾರೋಗ್ಯ
ಆರೋಪ×ಪ್ರತ್ಯಾರೋಪ
ಆವೃತ×ಅನಾವೃತ
ಆಸೆ×ನಿರಾಸೆ
ಆಸ್ತಿಕ×ನಾಸ್ತಿಕ

ಇರುಳು×ಹಗಲು
ಇಷ್ಟ×ಅನಿಷ್ಟ
ಇಹ×ಪರ

ಉಗ್ರ×ಶಾಂತ
ಉಚಿತ×ಅನುಚಿತ
ಉತ್ತರ×ದಕ್ಷಿಣ
ಉತ್ಕೃಷ್ಟ×ನಿಕೃಷ್ಟ
ಉತ್ಸಾಹ×ನಿರುತ್ಸಾಹ

ಉದಯ×ಅಸ್ತಮಾನ
ಉದಿಸು×ಅಸ್ತಮಿಸು
ಉದ್ಯೋಗಿ×ನಿರುದ್ಯೋಗಿ
ಉದ್ವೇಗ×ನಿರುದ್ವೇಗ
ಉನ್ನತ×ಅವನತ
ಉನ್ನತಿ×ಅವನತಿ
ಉಪಕಾರ×ಅಪಕಾರ
ಉಪಯುಕ್ತ×ನಿರುಪಯುಕ್ತ
ಉಪಯೋಗಿ×ನಿರುಪಯೋಗಿ

ಊರ್ಜಿತ×ಅನೂರ್ಜಿತ

ಏಕ×ಅನೇಕ
ಏರಿಕೆ×ಇಳಿಕೆ
ಏರು×ಇಳಿ

ಒಳಗೆ×ಹೊರಗೆ
ಒಳ್ಳೆಯ×ಕೆಟ್ಟ

ಕತ್ತಲೆ×ಬೆಳಕು
ಕಪ್ಪು×ಬಿಳುಪು
ಕಲಂಕ×ನಿಷ್ಕಲಂಕ
ಕಷ್ಟ×ಸುಖ
ಕೃತಜ್ಞ×ಕೃತಘ್ನ
ಕ್ರಮ×ಅಕ್ರಮ
ಕಾರ್ಯ×ಅಕಾರ್ಯ
ಕಾರಣ×ಅಕಾರಣ
ಕಾಲ×ಅಕಾಲ
ಕೀರ್ತಿ×ಅಪಕೀರ್ತಿ
ಕುಲಜ×ಕುಲಹೀನ
ಕೃತಕ×ಸಹಜ
ಕೊನೆ×ಮೊದಲು
ಗೆಲ್ಲು×ಸೋಲು
ಗುರು×ಶಿಷ್ಯ

ಗುಣ × ನಿರ್ಗುಣ (ಅವಗುಣ)
ಗುಣವಂತ × ಗುಣಹೀನ
ಗೌರವ × ಅಗೌರವ

ಚರ × ಸ್ಥಿರ
ಚಲ × ಅಚಲ

ಜಡ × ಚೈತನ್ಯ
ಜನನ × ಮರಣ
ಜಯ × ಅಪಜಯ
ಜೀವನ × ಮರಣ
ಜೀವ × ನಿರ್ಜೀವ

ತಿಳಿ × ರಾಡಿ
ತೃಪ್ತ × ಅತೃಪ್ತ
ತೆಗಳು × ಹೊಗಳು
ತೆಂಕಣ × ಬಡಗಣ

ದಟ್ಟ × ವಿರಳ
ದಯೆ × ನಿರ್ದಯೆ
ದಾಕ್ಷಿಣ್ಯ × ನಿರ್ದಾಕ್ಷಿಣ್ಯ
ದಿನ × ರಾತ್ರಿ
ದುಃಖ × ಸಂತೋಷ
ದುಃಖಿ × ಸುಖಿ
ದುರ್ಗತಿ × ಸದ್ಗತಿ
ದುರ್ಜನ × ಸುಜನ
ದುರ್ಬಲ × ಸಬಲ
ದೂರ × ಹತ್ತಿರ
ದೃಶ್ಯ × ಅದೃಶ್ಯ
ದೇವ × ದಾನವ

ಧನಿಕ × ಬಡವ
ಧರ್ಮ × ಅಧರ್ಮ
ಧೈರ್ಯ × ಅಧೈರ್ಯ

ನಂಬಿಕೆ X ಅಪನಂಬಿಕೆ
ನಗು X ಅಳು
ನಗುತ X ಅಳುತ
ನಗಿಸು X ಅಳಿಸು
ನಷ್ಟ X ಲಾಭ
ನಾಗರಿಕತೆ X ಅನಾಗರಿಕತೆ
ನಾಸ್ತಿಕ X ಆಸ್ತಿಕ
ನಿಂತಿರು X ಕುಳಿತಿರು
ನಿಬಿಡ X ವಿರಳ

ಪರ X ವಿರೋಧ
ಪರಧರ್ಮ X ಸ್ವಧರ್ಮ
ಪರಿಮಿತ X ಅಪರಿಮಿತ
ಪವಿತ್ರ X ಅಪವಿತ್ರ
ಪಾಪಿ X ನಿಷ್ಪಾಪಿ
ಪುಣ್ಯ X ಪಾಪ
ಪೂರ್ಣ X ಅಪೂರ್ಣ
ಪೂರ್ವ X ಪಶ್ಚಿಮ
ಪ್ರಕೃತ X ಅಪ್ರಕೃತ
ಪ್ರತ್ಯಕ್ಷ X ಅಪ್ರತ್ಯಕ್ಷ (ಪರೋಕ್ಷ)
ಪ್ರಬಲ X ದುರ್ಬಲ
ಪ್ರಯತ್ನ X ಅಪ್ರಯತ್ನ
ಪ್ರವೇಶ X ನಿರ್ಗಮನ
ಪ್ರಶ್ನೆ X ಉತ್ತರ
ಪ್ರಸನ್ನ X ಅಪ್ರಸನ್ನ
ಪ್ರಸಿದ್ಧ X ಕುಪ್ರಸಿದ್ಧ
ಪ್ರಾಚೀನ X ನವೀನ
ಪ್ರಾತಃಕಾಲ X ಸಂಧ್ಯಾಕಾಲ
ಪ್ರಾರಂಭ X ಮುಕ್ತಾಯ
ಪ್ರೀತಿ X ದ್ವೇಷ
ಪ್ರಿಯ X ಅಪ್ರಿಯ

ಬಂದಿತುXಹೋಯಿತು
ಬಡತನXಸಿರಿತನ
ಬಡವXಬಲ್ಲಿದ
ಬಲXನಿರ್ಬಲ (ಅಬಲ)
ಬಲXಎಡ
ಬಲಗಡೆXಎಡಗಡೆ
ಬಲವಂತXಬಲಹೀನ
ಬಿಸಿಲುXನೆರಳು
ಬಿಳಿXಕರಿ
ಬಿಳಿಯXಕರಿಯ
ಬೆಳಗುXಬೈಗು
ಬೇಡುXನೀಡು

ಭಯXನಿರ್ಭಯ

ಮರ್ತ್ಯXಅಮರ್ತ್ಯ
ಮರ್ಯಾದೆXಅಮರ್ಯಾದೆ
ಮಾನXಅಪಮಾನ [ಅವಮಾನ]
ಮುಂದೆXಹಿಂದೆ
ಮುಚ್ಚುXತೆಗೆ
ಮುನ್ನಡೆXಹಿನ್ನಡೆ
ಮೂಡಣXಪಡುವಣ
ಮೂಲXನಿರ್ಮೂಲ
ಮೂಲXಅಗ್ರ
ಮಿತ್ರXಶತ್ರು

ಯಶXಅಪಯಶ
ಯೋಗ್ಯXಅಯೋಗ್ಯ

ರಸಿಕXಅರಸಿಕ
ರಸಿಕತೆXಅರಸಿಕತೆ
ರಕ್ಷಕXಭಕ್ಷಕ
ರಕ್ಷಿತXಅರಕ್ಷಿತ

ಲಕ್ಷಣXಅವಲಕ್ಷಣ
ಲಕ್ಷ್ಯXಅಲಕ್ಷ್ಯ
ಲಭ್ಯXಅಲಭ್ಯ
ಲಾಭXನಷ್ಟ
ಲಿಖಿತXಅಲಿಖಿತ
ಲೌಕಿಕXಅಲೌಕಿಕ

ವಕ್ರXನೇರ
ವೃದ್ಧಿXಕ್ಷಯ
ವಿಚಾರXಅವಿಚಾರ
ವಿದೇಶಿXಸ್ವದೇಶಿ
ವಿಫಲXಸಫಲ
ವಿಶ್ವಾಸXಅವಿಶ್ವಾಸ

ಶಂಕೆXಅಶಂಕೆ
ಶಕ್ತXಅಶಕ್ತ
ಶಬ್ದXನಿಃಶಬ್ದ
ಶಿಕ್ಷೆXಅಶಿಕ್ಷೆ
ಶಿಸ್ತುXಅಶಿಸ್ತು
ಶುಚಿXಅಶುಚಿ
ಶುದ್ಧXಅಶುದ್ಧ
ಶುಷ್ಕXಆರ್ದ್ರ
ಶೋಷಣೆXಪೋಷಣೆ

ಸಜ್ಜನXದುರ್ಜನ
ಸಟೆXದಿಟ
ಸತ್ಯXಅಸತ್ಯ
ಸತ್ಸಂಗXದುಃಸಂಗ
ಸತ್ಪುತ್ರXಕುಪುತ್ರ
ಸದಭಿಮಾನXದುರಭಿಮಾನ
ಸನ್ಮಾರ್ಗXದುರ್ಮಾರ್ಗ
ಸಫಲXಅಸಫಲ

ಸಭ್ಯXಅಸಭ್ಯ	ಸ್ವಾತಂತ್ರ್ಯXಪಾರತಂತ್ರ್ಯ
ಸಮ್ಮುXಅಸಮ	ಸೀಮXಅಸೀಮ
ಸಮತೆXಅಸಮತೆ	ಸ್ವೀಕೃತXಅಸ್ವೀಕೃತ
ಸಮರ್ಥXಅಸಮರ್ಥ	ಸೇವಕXಒಡೆಯ
ಸರಳXಜಟಿಲ	ಸೋಲುXಗೆಲುವು
ಸರಸXವಿರಸ	ಹಕ್ಕುXಕರ್ತವ್ಯ
ಸರಿXತಪ್ಪು	ಹತ್ತುXಇಳಿ
ಸಹಜXಅಸಹಜ	ಹಿಂದಿನXಇಂದಿನ
ಸಹನೆXಅಸಹನೆ	ಹಿಗ್ಗುXಕುಗ್ಗು
ಸೃಷ್ಟಿXಲಯ	ಹಿತXಅಹಿತ
ಸ್ವXಪರ	ಹಿರಿದುXಕಿರಿದು
ಸ್ವರ್ಗXನರಕ	ಹೆಚ್ಚುXಕಡಿಮೆ
ಸ್ವಸ್ಥXಅಸ್ವಸ್ಥ	ಹೊಗಳಿಕೆXತೆಗಳಿಕೆ
ಸಾರ್ಥಕXನಿರರ್ಥಕ	ಹೊರXಒಳ
ಸಾಧ್ಯXಅಸಾಧ್ಯ	ಹೊರಗಣ್ಣುXಒಳಗಣ್ಣು
ಸಾಮಾನ್ಯXಅಸಾಮಾನ್ಯ	ಜ್ಞಾನXಅಜ್ಞಾನ
ಸಾವುXಹುಟ್ಟು	
ಸ್ಥಾವರXಜಂಗಮ	

ಗಾದೆಗಳು ವಿಸ್ತಾರದೊಂದಿಗೆ

1. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು

ಇದು ಕನ್ನಡದಲ್ಲಿ ಪ್ರಸಿದ್ಧವಾದ ಗಾದೆ. ನಮ್ಮ ಜೀವನದಲ್ಲಿ ಮಾನ ಮರ್ಯಾದೆಗೆ ಮಾತ್ರವೇ ಬೆಲೆ ಆ ಬೆಲೆಯನ್ನು ಕಳೆದುಕೊಂಡರೆ ಅದನ್ನು ಮತ್ತೆಗಳಿಸಲು ಎಂಥ ದಂಡತೆತ್ತರೂ ಸಾಲದು ಯಾವುದೇ ಆಮಿಷಕ್ಕೆ ಬಲಿಯಾಗಿ ಮಾನವನ್ನು ಅಡಿಕೆ ಯಂಥ ಸಣ್ಣ ವಸ್ತುವಿನಿಂದ ಕಳೆದುಕೊಂಡರು ಅದರಿಂದ ಆದ ಅವಮಾನವನ್ನು ಸರಿಪಡಿಸಲು ಆನೆಯಗಾತ್ರದ ದಂಡ ಕೊಟ್ಟರೂ ಆಗುವುದಿಲ್ಲ. ಇದರಿಂದ ಕಲಿಯುವ ನೀತಿಯೆಂದರೆ ಈ ಸಮಾಜದಲ್ಲಿ ಬಾಳಬೇಕಾದ ಮನುಷ್ಯ ಜವಾಬ್ದಾರಿಯಿಂದ ವಿವೇಕವಂತನಾಗಿ ಮಾನ ಮರ್ಯಾದೆ ಕಳೆದುಕೊಳ್ಳದೆ ಬಾಳಬೇಕು ಎಂಬುದು.

2. ಅತಿಯಾಸೆ ಗತಿಕೇಡು

"ಆಸೆ" ಎನ್ನುವುದು ಇರುವುದರಿಂದಲೇ ಈ ಪ್ರಪಂಚ ಮುಂದುವರೆಯುತ್ತಾ ಬಂದಿದೆ ಆರೋಗ್ಯಕರವಾದ ಆಸೆಯಿಂದ ಮಾನವ ಪ್ರಗತಿ ಹೊಂದುತ್ತಾನೆ. ಅದೇ ಆಸೆ ಅತಿ

ಯಾದರೆ ದುರಾಸೆಯಾಗಿ ಮನುಷ್ಯ ಅಧೋಗತಿಗಿಳಿಯುತ್ತಾನೆ. ಆದ್ದರಿಂದಲೇ ಭಗವಾನ್ ಬುದ್ಧನು "ಆಸೆಯೇ ದುಃಖಕ್ಕೆ ಮೂಲ" ಎಂದು ಹೇಳಿರುವುದು. ಇತರರಿಗೆ ತೊಂದರೆ ಕೊಟ್ಟಾದರೂ ನಮಗೆ ಅಗತ್ಯಕಿಂತ ಹೆಚ್ಚಿನ ಸವಲತ್ತುಗಳನ್ನು ಬಯಸುವುದು ಅತಿಯಾಸೆಯಾಗುತ್ತದೆ. ಅತಿಯಾಸೆ ಎಂದಿಗೂ ಒಳ್ಳೆಯ ಫಲ ಕೊಡುವುದಕ್ಕಿಂತ ಕೇಡುತರುವುದೇ ಜಾಸ್ತಿ ಎಂಬುದು ಈ ಗಾದೆಯ ಅರ್ಥ.

3. ಅತ್ತೆಗೊಂದು ಕಾಲ, ಸೊಸೆಗೊಂದುಕಾಲ

ಕಾಲ ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಚಲಿಸುತ್ತಿರುವುದೇ ಕಾಲದಗುಣ. ಈ ದಿನ ಮಗುವಾಗಿದ್ದವನು ನಾಳೆ ಯುವಕನಾಗಿ, ಮುದುಕನಾಗಿ ಕಣ್ಮರೆಯಾಗಿ ಹೋಗುತ್ತಾನೆ. ಈ ದಿನ ನಮಗೆ ಅಧಿಕಾರವಿದೆಯೆಂದು ನಮ್ಮ ಕೈ ಕೆಳಗಿನ ಅಸಹಾಯಕರಿಗೆ ಕಿರುಕುಳಕೊಡಬಾರದು. ಅದೇ ಮುಂದೆ ನಾವು ಅಶಕ್ತರಾದಾಗ ಅಥವಾ ಅಧಿಕಾರ ಕಳೆದುಕೊಂಡಾಗ ಅವರು ನಮಗೆ ಕಿರುಕುಳಕೊಟ್ಟೇ ಕೊಡು ತ್ತಾರೆ ಇದನ್ನು ಸಾಮಾನ್ಯ ಜನತೆಗೆ ಮನಗಾಣಿಸಲು ಎಲ್ಲರಿಗೂ ಚಿರಪರಿಚಿತವಾದ ಮನೆಮನೆಯ ಕಥೆಯಾದ ಅತ್ತೆ, ಸೊಸೆಯರ ಜೀವನದ ಉದಾಹರಣೆ ತೆಗೆದುಕೊಂಡು ಗಾದೆ ಮಾಡಿದ್ದಾರೆ.

4. ಅರ್ಥವಿಲ್ಲದ ಓದು ವ್ಯರ್ಥ

ವಿದ್ಯಾವಿಹೀನಃ ಪಶುಃ ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಓದುವುದು ಬದುಕಿ ಗೊಂದು ಅರ್ಥಗಳಿಸಲು. ಅರ್ಥವತ್ತಾದ ಓದಿನಿಂದ ನಾವು ವಿವೇಕ, ವಿವೇಚನೆಗಳನ್ನು ಗಳಿಸಿಕೊಳ್ಳುತ್ತೇವೆ. ಅದೇ ನಾವು ಕಾಲ ಕಳೆಯಲು ಉಪಯೋಗಕ್ಕೆ ಬಾರದ ಪುಸ್ತಕಗಳನ್ನೋದುವುದರಿಂದ ಕೆಲವೊಮ್ಮೆ ನಮ್ಮ ಜೀವನವೇ ಹಾಳಾಗಬಹುದು, ಆದ್ದರಿಂದಲೇ ನಮ್ಮ ಹಿರಿಯರು ಮಕ್ಕಳಿಗೆ ಸಣ್ಣ ಮಕ್ಕಳಿಂದಲೇ ಕ್ರಮಬದ್ಧವಾದ, ಉತ್ತಮವಾಗಿ ಬಾಳಲು ಪೂರಕವಾಗುವಂಥ ವಿದ್ಯೆಯನ್ನು ಕೊಡಿಸುತ್ತಿದ್ದರು. ಈಗಿನ ವಿದ್ಯಾರ್ಥಿಗಳಿಗೆ ಕಲಿಯಲು ಬಹುದೊಡ್ಡ ಜ್ಞಾನದ ಭಂಡಾರಗಳೇ ಇವೆ. ಹಿರಿಯರ ಹಾಗೂ ಶಿಕ್ಷಕರ ಸೂಕ್ತ ಮಾರ್ಗದರ್ಶನದಲ್ಲಿ ಅರ್ಥವತ್ತಾದ ಓದನ್ನು ಕಲಿಯಬಹುದು

5. ಅಲ್ಪರ ಸಂಗ ಅಭಿಮಾನ ಭಂಗ

ಗಾದೆಗಳೆಲ್ಲ ನಮ್ಮ ಹಿರಿಯರ ಅನುಭವದ ನುಡಿಗಳು ಅಲ್ಪರೆಂದರೆ ಯಾವುದೇ ನೀತಿ, ನಿಯಮಗಳಿಗೊಳಪಡದಿರುವವರು. ಲೋಕದ ಅಂಜಿಕೆಯಾಗಲೀ ಮಾನಾಪಮಾನಗಳ ಪರಿವೆಯಾಗಲೀ ಅವರಿಗಿರುವುದಿಲ್ಲ. ಅಂತಹವರೊಂದಿಗೆ ಒಡನಾಟವಿಟ್ಟುಕೊಂಡ ಮಾನವಂತರಿಗೂ ಕೆಲವೊಮ್ಮೆ ಅಪಮಾನವಾಗುವುದು ಸಹಜ, ಅಲ್ಲದೆ ಸಾಮಾನ್ಯ ಜನರು ಕೆಟ್ಟವರೊಡನಿರುವ ಒಳ್ಳೆಯವರನ್ನೂ ಸಹ ಶಂಕೆಯಿಂದಲೇ ನೋಡುತ್ತಾರೆ. ಆದುದರಿಂದಲೇ "ಸಹವಾಸದಿಂದ ಸನ್ಯಾಸಿಕೆಟ್ಟ" ಎಂಬ ಗಾದೆಯೂ ಉಂಟಾಗಿದೆ.

6. ಆಚಾರವೇ ಸ್ವರ್ಗ, ಅನಾಚಾರವೇ ನರಕ

ಆಚಾರವೆಂದರೆ ಒಂದು ಕ್ರಮಬದ್ಧವಾದ ನಡವಳಿಕೆ ಎಷ್ಟೋ ವರ್ಷಗಳಿಂದ ಬುದ್ಧಿವಂತರಾದ ಮನುಷ್ಯರು ಕಷ್ಟಪಟ್ಟು ಅಧ್ಯಯನ ಮಾಡಿ ಕೆಲವು ಕಟ್ಟುಪಾಡುಗಳನ್ನು ವಿಧಿಸಿಕೊಂಡಿದ್ದರು. ಇದರಿಂದ ಅವರ ಜೀವನ ಜಟಿಲತೆಗಳಿಲ್ಲದೇ ಸರಳವಾಗಿತ್ತು. ಅದನ್ನು ಧಿಕ್ಕರಿಸಿದ ಯುವಜನಾಂಗ ನಾನಾ ಸಂಕಷ್ಟಗಳಿಂದ ಮತ್ತು ರೋಗರುಜಿನಗಳಿಂದ ನರಳುತ್ತಾ ನರಕ ಸದೃಶವಾದಜೀವನ ನಡೆಸುತ್ತಿದ್ದಾರೆ. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳು ನಮ್ಮ ಹಿರಿಯರು ನಡೆಸುತ್ತಿದ್ದ ಜೀವನದ ರೀತಿಯನ್ನೇ ಬೆಂಬಲಿಸುತ್ತಿವೆ. ಅನಾಚಾರಗಳನ್ನು ತಡೆಯಲೆಂದೇ ಹಿರಿಯರು ಈ ಗಾದೆಯ ಮೂಲಕ ಎಚ್ಚರಿಕೆ ನೀಡುತ್ತಾ ಬಂದಿದ್ದಾರೆ.

7. ಆಳಾಗಿ ದುಡಿ ಅರಸನಾಗಿ ಉಣ್ಣು

ಆಳಿನಂತೆ ಕೆಲಸ ಮಾಡಬಲ್ಲವನಿಗೆ ಅರಸನಂತೆ ಊಟ ಮಾಡಬಹುದು. ಆಳುಗಳ ಕೊರತೆಯಿಂದ ಕೆಲಸಗಳನ್ನು ಕೈಬಿಡುವುದಕ್ಕಿಂತ ತಾವೇ ಮಾಡಿಕೊಂಡರೆ ಅದರಿಂದ ತೃಪ್ತಿ ಅಲ್ಲದೆ ಸಮಯಕ್ಕೆ ಸರಿಯಾಗಿ ನಮ್ಮ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಿಕೊಂಡು ಯಾರದೇ ಹಂಗಿಲ್ಲದೇ, ಆರೋಗ್ಯವಂತರಾಗಿ ಇರಬಹುದು. ಕಷ್ಟಪಟ್ಟು ಕೆಲಸಮಾಡುವುದನ್ನು ಕಲಿತಿದ್ದರೆ ಯಾರ ಅಗತ್ಯವೂ ಇಲ್ಲದೆ ಸ್ವಾವಲಂಬಿಗಳಾಗಿ, ರೋಗರಹಿತರಾಗಿ ಅರಸನಂತೆಯೇ ವೈವಿಧ್ಯಮಯವಾದ ಆಹಾರವನ್ನು ತೆಗೆದುಕೊಳ್ಳಬಹುದು ಸೋಮಾರಿಗಳಾದರೆ ತಿಂದದ್ದು ಅರಗದೆ ಹಲವು ರೋಗಗಳಿಂದ ಪೀಡಿತರಾಗಿ ಅಶಕ್ತರಾಗಿರುತ್ತಾರೆ. ಆದ್ದರಿಂದಲೇ ಈ ಗಾದೆಯು ದುಡಿದು ತಿಂದರೆ ಸುಖವುಂಟೆಂದು ಹೇಳುತ್ತದೆ.

8. ಈಸಬೇಕು ಇದ್ದು ಜೈಸ ಬೇಕು

ಈ ಜೀವನದಲ್ಲಿ ಬರುವ ಕಷ್ಟಗಳನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಂಡು ಬಾಳಿದರೆ ಜಯ ಲಭಿಸುವುದೆಂಬುದನ್ನು ಈ ಗಾದೆ ತಿಳಿಸುತ್ತದೆ. ರಾತ್ರಿ ಕಳೆದ ಬಳಿಕ ಹಗಲು, ಹಗಲಿನ ನಂತರ ರಾತ್ರಿಯಂತೆಯೇ ಕಷ್ಟ ಸುಖಗಳೂ ಬರುತ್ತಲೇ ಇರುತ್ತವೆ. ಸುಖ ಬಂದಾಗ ಹಿಗ್ಗದೆ, ಕಷ್ಟ ಬಂದಾಗ ಕುಗ್ಗದೆ ಜೀವನ ಸಾಗಿಸಲು ಕಲಿತಿದ್ದರೆ ಅಂತಹವರನ್ನು ಮಾದರಿಯಾಗಿ ಉದಾಹರಿಸುತ್ತಾರೆ. ನಮ್ಮ ಪುರಾಣಗಳಲ್ಲಿ ಅಂತಹವರ ಉದಾಹರಣೆಗಳು ಬಹಳ ಇವೆ.

9. ಒಡೆದ ಮುತ್ತು ಕಳೆದ ಹೊತ್ತು ಒಂದೆ

ಸಮಯಕ್ಕೆ ಯಾವಾಗಲೂ ಬೆಲೆ ಕಟ್ಟಲು ಆಗದು. ಹಾಗೆಯೇ ಮುತ್ತೂ ಸಹ ಒಂದು ಸಾರಿ ಒಡೆದ ಮುತ್ತನ್ನು ಯಾವ ರೀತಿಯೂ ಬಳಸಲಾಗುವುದಿಲ್ಲ.

ಕಾಲವನ್ನು ತಡೆಯಲಾಗಲೀ ಹಿಂದೆ ಕಳುಹಿಸಲಾಗಲೀ ಯಾರಿಗೂ ಸಾಧ್ಯವಿಲ್ಲ. ಆದ್ದರಿಂದಲೇ ಈ ಹಿತೋಕ್ತಿ ಬಂದಿದೆ. ಕಾಲವನ್ನು ವೃಥಾ ವ್ಯರ್ಥವಾಗಿ ಕಳೆದು ಬಿಟ್ಟರೆ ಮುಂದೆ ಪಶ್ಚಾತ್ತಾಪಪಡಬೇಕಾಗುವುದು. ಅದರ ಬದಲು ಉಪಯೋಗಕರ ವಾಗಿ ಕಾಲವನ್ನು ಬಳಸಿಕೊಂಡರೆ ನಮ್ಮ ಉನ್ನತಿಯಾಗುವುದು. ಆದ್ದರಿಂದಲೇ ಪುರಂದರದಾಸರು ಮಾನವ ಜನ್ಮ ದೊಡ್ಡದು, ಇದನ್ನು ಹಾಳುಮಾಡಿಕೊಳ್ಳಬೇಡಿ, ಸದುಪಯೋಗ ಮಾಡಿಕೊಳ್ಳಿ ಎಂದು ಹೇಳಿದ್ದಾರೆ.

10. ಕಾಯಕವೇ ಕೈಲಾಸ

ಈ ವಾಕ್ಯವನ್ನು ಬಸವಣ್ಣನವರು ಪ್ರಸಿದ್ಧಿಗೆ ತಂದರು. ಯಾವಾಗಲೂ ಏನಾದರೂ ಉಪಯೋಗಕರವಾದ ಕೆಲಸ ಮಾಡುತ್ತಿದ್ದರೆ ಮನಸ್ಸು ಪ್ರಫುಲ್ಲವಾಗಿರುತ್ತದೆ ಅಲ್ಲದೆ ಕೆಲಸವಿಲ್ಲದ ಮನಸ್ಸು ದೆವ್ವಗಳ ಕಾರ್ಯಾಗಾರವಾಗುವುದೆಂದು ಆಂಗ್ಲರಲ್ಲಿ ಗಾದೆಯಿದೆ. ಕೆಲಸ ಮಾಡುವುದರಿಂದ ಮೈ ಮನಸ್ಸುಗಳೆರಡಕ್ಕೂ ವ್ಯಾಯಾಮವಾಗಿ ಮನುಷ್ಯ ಚಟುವಟಿಕೆಯಿಂದಿರುತ್ತಾನೆ, ರೋಗಗಳೂ ಧಾಳಿಯಿಡಲಾರವು. ಒಳ್ಳೆಯ ಕೆಲಸದಲ್ಲಿ ನಮ್ಮನ್ನು ತೊಡಗಿಸಿಕೊಂಡಾಗ ಕೆಟ್ಟ ಕೆಟ್ಟ ವಿಚಾರಗಳು ನಮ್ಮ ಮನದಲ್ಲಿ ಸುಳಿ ಯುವುದಿಲ್ಲ. ಅಂತಹ ನಿರ್ಮಲವಾದ ಮನಸ್ಸು ಕೈಲಾಸದಷ್ಟೇ ಪವಿತ್ರ. ಕೆಲಸವೇ ದೇವರ ಪೂಜೆ ಎಂಬ ಮಾತಿದೆ.

11. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ಬಹಳ ಸಮಯ ಬಳಸಿ ಕಷ್ಟಪಟ್ಟು ಮಾಡಿದ ಕೆಲಸವನ್ನು ಕೆಲಕ್ಷಣಗಳಲ್ಲೇ ಯಾರಾ ದರೂ ಹಾಳು ಮಾಡಿದರೆ ಕುಂಬಾರನು ಇಡೀ ವರುಷ ಕಷ್ಟ ಪಟ್ಟು ಮಣ್ಣನ್ನು ಹೊತ್ತು ತಂದು, ಅದನ್ನು ಹದಮಾಡಿ ಚಕ್ರದಲ್ಲಿ ತಿರುಗಿಸಿ ಮಡಿಕೆ ಮಾಡಿ, ಅದನ್ನು ಹದವಾಗಿ ಸುಟ್ಟು ಜೋಡಿಸಿದ್ದನ್ನು ಕೇವಲ ಒಂದು ದೊಣ್ಣೆಯಿಂದ ಒಂದೇ ಏಟಿಗೆ ಒಡೆದು ಹಾಕಿದಂತೆ ಎಂಬುದನ್ನು ಉದಾಹರಿಸುತ್ತಾರೆ. ವಿದ್ಯಾರ್ಥಿಗಳು ವರ್ಷವೆಲ್ಲಾ ಕಷ್ಟಪಟ್ಟು ಬರೆದ ಟಿಪ್ಪಣಿಗಳ ಪುಸ್ತಕವನ್ನು ಯಾರಾದರೂ ಹಾಳು ಮಾಡಿದಾಗ ಈ ಗಾದೆಯು ನೆನಪಾಗುತ ದೆ.

12. ಕುಲಕ್ಕೆ ಮೃತ್ಯು ಕೊಡಲಿಯ ಕಾವು

ಹತ್ತಿರದ ಬಂಧುಗಳೇ ಒಂದು ಮನೆಯವರನ್ನು ನಾಶ ಮಾಡಿದರೆ ಈ ಮಾತನ್ನು ಹೇಳುತ್ತಾರೆ. ಮರಕಡಿಯಲು ಬಳಸುವ ಕೊಡಲಿಗೆ ಮರದ ಕಾವೇ ಬೇಕು. ಒಂದು ಮರದ ತುಂಡೇ ತನ್ನದೇ ಜಾತಿಯ ಇತರ ಮರಗಳನ್ನು ಕಡಿಯಲು ಸಹಾಯ ಮಾಡಿದ ಹಾಗೆ, ಒಂದು ಮನೆಯಲ್ಲಿ ಯಾರಾದರೂ ಅಡ್ಡದಾರಿ ಹಿಡಿದರೆ ಆ ಮನೆಯು ನಾಶವಾಗುತ್ತದೆ.

13 ಕೈ ಕೆಸರಾದರೆ ಬಾಯಿ ಮೊಸರು

ಕಷ್ಟಪಟ್ಟು ಕೈಯೆಲ್ಲ ಕೆಸರು ಮಾಡಿಕೊಂಡು ಹುಲ್ಲನ್ನು ಕೊಯ್ದು, ಕಡ್ಡಿಕಾಳು ಸಂಗ್ರಹಿಸಿ ದನ ಕರುಗಳನ್ನು ಸಾಕಿದರೆ ಪರಿಶುದ್ಧವಾದ ಮೊಸರನ್ನು ಪಡೆದು ಉಪ ಯೋಗಿಸಬಹುದು ಕಷ್ಟಪಡಲು ಅಂಜಿದರೆ ಯಾವ ಸೌಲಭ್ಯಗಳೂ ದೊರೆಯುವುದಿಲ್ಲ. ನಾವು ಯಾವುದೇ ಕೆಲಸ ಮಾಡದೆ ಒಳ್ಳೆಯ ಫಲಗಳನ್ನು ಮಾತ್ರ ನಿರೀಕ್ಷಿಸುವುದು ತಪ್ಪು ಆದ್ದರಿಂದಲೇ ಕಷ್ಟಪಟ್ಟರೆ ಫಲವುಂಟು ಎಂದೂ ಸಹ ಹೇಳುತ್ತಾರೆ.

14. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗಿತೇ ?

ಗಿಡವು ಚಿಕ್ಕದಿರುವಾಗ ತೆಳುವಾಗಿ ಬಳುಕುತ್ತಾ ಇರುತ್ತದೆ ಅದನ್ನ ಹೇಗೆ ಬೇಕಾದರೂ ಬಗ್ಗಿಸಬಹುದು. ಅದೇ ಗಿಡ ಮರವಾದರೆ ಅದರ ಕಾಂಡ ಬಲಿತು. ಗಡುಸಾಗುತ್ತದೆ ಅದನ್ನು ಬಗ್ಗಿಸಲಾಗುವುದಿಲ್ಲ. ಅದರಂತೆಯೇ ಚಿಕ್ಕ ಮಕ್ಕಳ ಮನಸ್ಸೂ ಸಹ ಸಣ್ಣ ಗಿಡದಂತೆಯೇ ಮೃದುವಾಗಿರುತ್ತದೆ. ಆದ್ದರಿಂದ ಆಗಲೇ ಅವರ ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳು, ಒಳ್ಳೆಯ ಗುಣಗಳು ಮುಂತಾದವನ್ನು ಬಿತ್ತಿದರೆ ಅದು ಅವರಲ್ಲಿ ಬೇರೂರಿ, ದೊಡ್ಡವರಾದ ಬಳಿಕವೂ ಆ ಒಳ್ಳೆಯ ಗುಣಗಳು ಅವರಲ್ಲಿ ಕಾಣುತ್ತವೆ. ಅದನ್ನೇ ದೊಡ್ಡವರಾದ ಮೇಲೆ ಕಲಿಸಲು ಸಾಧ್ಯವಿಲ್ಲ. ಇದನ್ನು ತಿಳಿದೇ ಹಿಂದಿನ ಕಾಲದವರು ಚಿಕ್ಕ ಮಕ್ಕಳಿದ್ದಾಗಲೇ ಸಚ್ಚಾರಿತ್ರ್ಯವನ್ನು ಬೋಧಿಸುತ್ತಿದ್ದರು.

15. ಗುರುವಿನಂತೆ ಶಿಷ್ಯ

ಗುರುಃ ಬ್ರಹ್ಮ ಗುರುಃ ವಿಷ್ಣುಃ ಗುರುಃ ದೇವೋ ಮಹೇಶ್ವರಃ ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ಎಂದು ಹಿಂದಿನವರು ಗುರುವಿನ ಹಿರಿಮೆಯನ್ನು ಹಾಡಿ ಹೊಗಳಿದ್ದಾರೆ. ನಮ್ಮ ಪರಂಪರೆಯಲ್ಲಿ ಗುರುವಿಗೆ ದೇವರ ನಂತರದ ಸ್ಥಾನ ನೀಡಿದ್ದಾರೆ. ಗುರುವನ್ನು ನಂಬಿ ಗುರುಕುಲದಲ್ಲೇ ತಮ್ಮ ಮಕ್ಕಳನ್ನು ಕೆಲವು ವರ್ಷಗಳವರೆಗೆ ಬಿಟ್ಟಿರುತ್ತಿದ್ದರು. ವಿದ್ಯಾರ್ಥಿಗಳು ತಮ್ಮ ಪರಿಚಯವನ್ನು ಬೇರೆಯವರಿಗೆ ತಿಳಿಸುವಾಗ ಅವರು ಯಾವ ಗುರುವಿನ ಶಿಷ್ಯ ಎಂಬುದನ್ನು ಹೇಳುತ್ತಿದ್ದರು. ಗುರುವಿಗಿದ್ದ ಗೌರವದ ಮೂಲಕ ಅವರ ಶಿಷ್ಯರ ಯೋಗ್ಯತೆಯನ್ನು ಅಳೆಯುತ್ತಿದ್ದರು. ಹಾಗಾಗಿಯೇ ಗುರುವಿನಂತೆ ಶಿಷ್ಯನೆಂಬ ಮಾತು ಪ್ರಚಾರಕ್ಕೆ ಬಂತು.

16. ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ

ಮನುಷ್ಯನಾಗಲಿ, ಪ್ರಾಣಿ ಪಕ್ಷಿಗಳಾಗಲೀ ಶಿಶುವಾಗಿ ಜನ್ಮ ತಳೆದಾಗ ಮೊದಲು ನೋಡುವುದು ತಾಯಿಯನ್ನು. ಆಹಾರ, ಪೋಷಣೆ, ವಿದ್ಯೆ ಪ್ರತಿಯೊಂದೂ ತಾಯಿಯಿಂದಲೇ ಮಗುವಿಗೆ ಬರುವುದು, ತಾಯಿ ತನ್ನ ಮಗುವಿಗಾಗಿ ಏನು ಬೇಕಾದರೂ

ಮಾಡುವಳು. ಆದ್ದರಿಂದ ತಾಯಿಗಿಂತ ಬಂಧು ಬೇರೆಯಿಲ್ಲ. ಪ್ರತಿಯೊಂದು ಜೀವಿಯೂ ಮೊದಲು ಕರೆಯುವುದು ತಾಯಿಯನ್ನೇ ಆದರಂತೆಯೇ ರುಚಿಗಳಲ್ಲಿ ಮುಖ್ಯವಾದದ್ದು ಉಪ್ಪು ಸಿಹಿಯನ್ನು ಸೇವಿಸದೇ ಎಷ್ಟು ದಿನಗಳುಬೇಕಾದರೂ ಇರಬಹುದು ಆದರೆ ಉಪ್ಪು ಇಲ್ಲದೇ ಬದುಕುವುದು ಕಷ್ಟ. ಉಪ್ಪಿನ ಪ್ರಾಮುಖ್ಯತೆಯನ್ನು ಅರಿತೇ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಮಾಡಿ ಉಪ್ಪಿನ ದರ ಏರಿಕೆಯನ್ನು ಪ್ರತಿಭಟಿಸಿದರು. ಆದ್ದರಿಂದಲೇ ಈ ಗಾದೆ ಬಳಕೆಗೆ ಬಂದಿದೆ.

17. ತಾಳಿದವನು ಬಾಳಿಯಾನು

ತಾಳುವಿಕೆಗಿಂತ ತಪವಿಲ್ಲ ಎಂದು ತಾಳ್ಮೆಯ ಹಿರಿಮೆಯನ್ನು ಕೊಂಡಾಡಿದ್ದಾರೆ. ಹಾಗೆಯೇ ಆತುರಗಾರನಿಗೆ ಬುದ್ಧಿ ಮಟ್ಟ ಎಂದೂ ಹೇಳುತ್ತಾರೆ, ಅದರ ಅರ್ಥ ದುಡುಕದೆ ತಾಳ್ಮೆಯಿಂದ ವಿಚಾರ ಮಾಡಿ ಕೆಲಸ ಮಾಡಬೇಕು ಎಂದು. ಸಂಸ್ಕೃತ ಸುಭಾಷಿತಗಳಲ್ಲೊಂದು "ಪ್ರತ್ಯಕ್ಷವಾದರೂ ದುಡುಕದೆ ಪರೀಕ್ಷಿಸಿ ನೋಡು" ಎಂದು ಹೇಳುತ್ತದೆ. ತಾಳ್ಮೆ ಇದ್ದರೆ ಏನನ್ನಾದರೂ ಸಾಧಿಸಬಹುದು.

18. ತುಂಬಿದ ಕೊಡ ತುಳುಕುವುದಿಲ್ಲ

ಪೂರ್ಣ ತುಂಬಿದ ಕೊಡ ಯಾವಾಗಲೂ ತುಳುಕದೆ ಇರುತ್ತದೆ. ಅರ್ಧ ತುಂಬಿದ ಕೊಡದ ಅಲುಗಾಟ ಹೆಚ್ಚು. ಅಂತೆಯೇ ಪೂರ್ಣ ತಿಳುವಳಿಕೆಯುಳ್ಳವರು ಎಂದೂ ಬಡಾಯಿ ಕೊಚ್ಚುವುದಿಲ್ಲ. "ಅಲ್ಪ ವಿದ್ಯಾ ಮಹಾಗರ್ವಿ" ಎಂಬಂತೆ ಅರ್ಧ ಕಲಿತವರು ಜಂಬದಿಂದ ಬೀಗುತ್ತಾರೆ. ಅದರ ಅರ್ಥವನ್ನು ಸಾಮಾನ್ಯರಿಗೆ ಸುಲಭವಾಗಿ ತಿಳಿಸಲು ನೀರು ಮತ್ತು ಕೊಡದ ಉದಾಹರಣೆ ಕೊಡುತ್ತಾರೆ.

19. ದುಡಿಮೆಯೇ ದುಡ್ಡಿನ ತಾಯಿ

ಈಗಿನ ಕಾಲದಲ್ಲಿ ಹಣವಿಲ್ಲದೆ ಜೀವನ ಸಾಗಿಸಲು ಆಗುವುದಿಲ್ಲ. ಹಣಗಳಿಸಲು ಸುಲಭವಾದ ಮಾರ್ಗಗಳನ್ನು ಅನುಸರಿಸುವವರೇ ಹೆಚ್ಚು. ಸುಲಭ ಮಾರ್ಗಗಳು ಯಾವಾಗಲೂ ಸುರಕ್ಷಿತವಲ್ಲ. ಆದರೆ ದುಡಿದುಗಳಿಸಿದ ಹಣ ತೃಪ್ತಿ, ನಿರ್ಭಯ, ನೆಮ್ಮದಿಯನ್ನು ತರುತ್ತದೆ. ಆದ್ದರಿಂದಲೇ ನಾವು ಯಾವಾಗಲೂ "ದುಡಿಮೆಯೇ ದೇವರು" ಎಂದು ನಂಬಿಕೊಂಡು ದುಡಿದರೆ ಹಣ ತಾನಾಗಿಯೇ ದೊರೆಯುತ್ತದೆ.

20. ನಾಲಿಗೆ ಒಳ್ಳೆಯದಾದರೆ ನಾಡೆಲ್ಲಾ ಒಳ್ಳೇದು

ನಾಲಿಗೆಯ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಜೀವವಿರುವ ಪ್ರಾಣಿಗಳಲ್ಲೆಲ್ಲಾ ಮನುಷ್ಯನ ನಾಲಿಗೆಯೊಂದೇ ತನಗನ್ನಿಸಿದ್ದನ್ನೆಲ್ಲಾ ಹೊರಗೆಡಹುವುದು. ನಾಲಿಗೆ ಎರಡೂ ಕಡೆ ಅಲಗಿರುವ ಖಡ್ಗದಂತೆ ಅದನ್ನು ನಾವು ಹುಶಾರಾಗಿ ಉಪಯೋಗಿಸ

ಬೇಕು. ಒಳ್ಳೆಯ ಮಾತಿನಿಂದ ಊರವರನ್ನೆಲ್ಲಾ ವಿಶ್ವಾಸಿಗಳನ್ನಾಗಿ ಮಾಡಿಕೊಳ್ಳ ಬಹುದು ಹಾಗೆಯೇ ಕೆಟ್ಟ ಮಾತಾಡಿದರೆ ಅವರ ಬಳಿ ಯಾರೂ ಸುಳಿಯುವುದಿಲ್ಲ. ಕೆಲವರ ಕಷ್ಟದ ಸಮಯಗಳಲ್ಲಿ ಸ್ವಾಂತ್ವನದ ಕೆಲವು ಒಳ್ಳೆಯ ಮಾತುಗಳು ಒಳ್ಳೆಯ ಪರಿಣಾಮ ಕೊಡುತ್ತವೆ. ಒಳ್ಳೆಯ ಮಾತಿನ ಮಹತ್ವ ಹಣಕ್ಕಿಂತ ಒಳ್ಳೆಯದು. ಇಂತಹ ಉದಾಹರಣೆಗಳನ್ನು ನಾವು ದಿನ ನಿತ್ಯ ಕಾಣುತ್ತಿದ್ದೇವೆ.

21. ಪ್ರತ್ಯಕ್ಷವಾಗಿ ಕಂಡರೂ ಪರೀಕ್ಷಿಸಿನೋಡು

ನಾವು ಯಾವುದನ್ನೂ ಕಂಡದ್ದೆಲ್ಲಾ ಸತ್ಯವೆಂದು ತಿಳಿಯಲಾಗುವುದಿಲ್ಲ "ಹೊಳೆಯುವು ದೆಲ್ಲಾ ವಜ್ರ ಅಥವಾ ಚಿನ್ನವಲ್ಲ" ಎಂಬಂತೆ ಕಾಣುವುದೆಲ್ಲಾ ನಿಜವಲ್ಲ. ಮೇಲ್ನೋಟಕ್ಕೆ ಕಾಣುವ ಸಂಗತಿಗಳನ್ನು ಪರೀಕ್ಷಿಸಹೊರಟಾಗ ತಿಳಿಯುವ ವಿಷಯಗಳು ಕೆಲವೊಮ್ಮೆ ಬಹಳ ಆಶ್ಚರ್ಯಕರವಾಗಿರಬಹುದು. "ತೋಟ ಶೃಂಗಾರ, ಒಳಗೆ ಗೋಣಿಸೊಪ್ಪು" ಎಂಬಂತೆ ಕೆಲವೊಮ್ಮೆ ನಮ್ಮ ಅನುಭವಕ್ಕೆ ಬರುವುದುಂಟು.

22. ಬೆಳ್ಳಗಿರುವುದು ಹಾಲಲ್ಲ

ಅನ್ಯಾಯಕರು ಮೋಸಹೋಗದಿರಲೆಂದು ಈ ಗಾದೆಯನ್ನು ಮಾಡಿದಂತಿದೆ. ಹಾಲೆಂದು ಹಿಟ್ಟನ್ನು ಕಲಸಿ ಕೊಟ್ಟರೆ ಅದೇ ಹಾಲೆಂದು ಕುಡಿಯುತ್ತಿದ್ದ ಅಶ್ವತ್ಥಾಮನು ನಿಜವಾದ ಹಾಲನ್ನು ಕುಡಿದಾಗ ಅವೆರಡರ ಅಂತರ ತಿಳಿದು ನಿಜವಾದ ಹಾಲೇಬೇಕೆಂದು ಹಟ ಹಿಡಿದ ಕಥೆ ಎಲ್ಲರಿಗೂ ತಿಳಿದದ್ದೇ. ನಾವು ಕೆಲವರನ್ನು ಅವರ ಹೊರನೋಟಕ್ಕೆ ಮರುಳಾಗಿ ನಂಬಿಕೊಳ್ಳುತ್ತೇವೆ. ಆದರೆ ಅವರ ನಿಜವಾದ ಬಣ್ಣ ಬಯಲಾದರೆ ಅದು ಸುಣ್ಣದ ತಿಳಿ ನೀರಿನಂತೆ ಕಿರಿಕಿರಿಯುಂಟಾಗುವುದು. ಆದ್ದರಿಂದ ನೋಡಿದೊಡನೆಯೇ ಎಲ್ಲರನ್ನೂ ನಂಬುವುದು ಸರಿಯಲ್ಲ ಎಂದು ಈ ಗಾದೆಯ ನೀತಿ.

23. ಬೆಳೆಯುವ ಸಿರಿ ಮೊಳಕೆಯಲ್ಲಿ

ಬೆಳೆಯುವ ಸಸಿಗಳನ್ನು ನೋಡಿದರೆ ಅದು ಯಾವ ಗಿಡ? ಅದರ ಆರೋಗ್ಯಕರ ಬೆಳವಣಿಗೆ ಎಲ್ಲವೂ ಗೊತ್ತಾಗುತ್ತದೆ. ಅದರಂತೆಯೇ ಬೆಳೆಯುವ ಮಕ್ಕಳೂ ಸಹ ಅವರು ಮುಂದೆ ಏನಾಗುವರೆಂಬುದು ಮೊದಲೇ ತಿಳಿಯುತ್ತದೆ. ಅವರು ಬೆಳೆಯುವ ಪರಿಸರವೂ ಅದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ಪ್ರಸಿದ್ಧ ವ್ಯಕ್ತಿಗಳ ಉದಾಹರಣೆಗಳಲ್ಲಿ ಅವರೆಲ್ಲಾ ಚಿಕ್ಕ ವಯಸ್ಸಿನಿಂದಲೇ ಒಳ್ಳೆಯ ಗುಣ ಗಳನ್ನು ಹೊಂದಿರುತ್ತಾರೆ. ಅದರಂತೆಯೇ ಕುಪ್ರಸಿದ್ಧ ವ್ಯಕ್ತಿಗಳೂ ಸಹ ಚಿಕ್ಕಂದಿ ನಿಂದಲೇ ಕೆಟ್ಟ ಗುಣಗಳನ್ನು ಹೊಂದಿದ್ದ ಉದಾಹರಣೆಗಳು ಹೇರಳವಾಗಿವೆ. ತಾಯಿಯ

ಗರ್ಭದಲ್ಲಿದ್ದಾಗಲೇ ಚಕ್ರವ್ಯೂಹದ ಮಾಹಿತಿಯನ್ನು ತಿಳಿದಿದ್ದ ಅಭಿಮನ್ಯುವಿನ ವೃತ್ತಾಂತವನ್ನು ಕೇಳದವರಾರು?

24. ಮನಸ್ಸಿದ್ದರೆ ಮಾರ್ಗ

ದೇವನು ಮಾನವನಿಗೆ ಮಾತ್ರ ಆಲೋಚಿಸುವ ಮನಸ್ಸನ್ನು ಕೊಟ್ಟಿದ್ದಾನೆ. ದೇಹದ ಚಟುವಟಿಕೆಗಳನ್ನು ನಿಯಂತ್ರಿಸುವುದು ಮನಸ್ಸು. ಮನಸ್ಸು ಎಂತಹ ಕ್ಲಿಷ್ಟಕರವಾದ ಕಾರ್ಯವನ್ನೂ ಸುಲಭವಾಗಿ ಮಾಡಲು ದಾರಿ ತೋರಿಸುವುದು. ಆದ್ದರಿಂದಲೇ ಎಂತಹ ಬಲಹೀನನಾದ ಮನುಷ್ಯನೂ ಮನಸ್ಸು ಮಾಡಿದರೆ ಅತ್ಯಂತ ಕಠಿಣವಾದ ಕೆಲಸ ಮಾಡಬಲ್ಲ. ದೃಢವಾದ ಮನಸ್ಸಿನಿಂದ ಕೆಲಸ ಮಾಡಿದರೆ ಅಸಾಧ್ಯವೆಂದು ಕೊಂಡದ್ದನ್ನು ಸುಲಭವಾಗಿ ಸಾಧ್ಯವಾಗಿಸಬಹುದು. ನಮ್ಮ ಸುತ್ತಮುತ್ತ ಬೇಕಾದಷ್ಟು ವಿಸ್ಮಯಕರವಾದ, ಕಷ್ಟಕರವಾದಂತಹ ಕೆಲಸಗಳು ಉದಾಹರಣೆಯಾಗಿ ಸಿಗುತ್ತವೆ. ಮಾನವನ ಇಂದಿನ ವೈಜ್ಞಾನಿಕ, ಸಾಹಿತ್ಯಿಕ, ಮುಂತಾದ ಎಲ್ಲಾ ರಂಗಗಳಲ್ಲೂ ಮಾನವನ ಮನಸ್ಸಿನ ಸಾಧನೆಯ ಕೌಶಲ್ಯ ಇದ್ದೇ ಇವೆ. ಈ ಗಾದೆಯನ್ನು ಮನನ ಮಾಡಿಕೊಂಡರೆ ಎಂತಹ ನಿರಾಶಾವಾದಿಗಳೂ ಸಹ ಜೀವನದಲ್ಲಿ ಜಯಗಳಿಸಬಹುದು.

25. ಮಾಡಿದ್ದುಣ್ಣೋ ಮಹಾರಾಯ

ನಾವು ಮಾಡಿದ ಅಡುಗೆ ಹೇಗೇ ಇದ್ದರೂ ನಾವು ಹೇಗೆ ಊಟ ಮಾಡುತ್ತೇವೋ ಹಾಗೆಯೇ ನಾವು ಮಾಡಿದ ಕೆಲಸಗಳ ಫಲಗಳು ಒಳ್ಳೆಯದಾದರೂ, ಕೆಟ್ಟದ್ದಾದರೂ ನಾವೇ ಅನುಭವಿಸಬೇಕು. ನಾವು ಯಾವ ಕಾರ್ಯವನ್ನಾದರೂ ಒಳ್ಳೆಯ ಅಡುಗೆ ಊಟ ಮಾಡಿದಂತೆ ಯಾವಾಗಲೂ ಒಳ್ಳೆಯದಿರುತ್ತದೆ. ಕೆಟ್ಟ ಕೆಲಸ ಮಾಡಿದರೆ ಅದು ಎಂದಿಗೂ ಒಳ್ಳೆಯ ಫಲ ತರುವುದಿಲ್ಲ ಕೆಟ್ಟ ಅಡುಗೆ ಊಟ ಮಾಡಿದಾಗ ರೋಗ ಉಂಟಾಗುವಂತೆಯೇ ಕೆಟ್ಟ ಕೆಲಸಗಳ ಫಲವೂ ಇರುವುದೆಂದು ಇದರರ್ಥ.

26. ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ

ಮಾತೇ ಮುತ್ತು, ಮಾತೇ ಮೃತ್ಯು ಎಂದು ತಿಳಿದವರು ಹೇಳಿದ್ದಾರೆ. ಮಾತನ್ನು ಯಾವ ರೀತಿ, ಯಾವ ಸಂದರ್ಭದಲ್ಲಿ ಹೇಗೆ ಆಡಬೇಕೆಂಬುವದನ್ನು ತಿಳಿದಿದ್ದರೆ ಅದರಿಂದ ನಾವು ಯಾವ ವಿಧವಾದ ವಿವಾದಗಳಿಗೂ ಒಳಗಾಗಬೇಕಿಲ್ಲ. ಎಂತಹ ಕಠಿಣ ಪ್ರಸಂಗವನ್ನೂ ಸಹ ಮಾತಿನಿಂದಲೇ ಬಗೆಹರಿಸಬಹುದು. ಹಾಗೆಯೇ ಊಟವೂ ಸಹ ಸರಿಯಾಗಿ ಊಟ ಮಾಡಲು ಗೊತ್ತಿದ್ದರೆ ಅಂತಹವರು ಯಾವುದೇ ರೋಗಕ್ಕೆ ತುತ್ತಾಗಲಾರರು ಸಿಕ್ಕಿದ್ದನ್ನೆಲ್ಲಾ ಅಳತೆ ಮೀರಿ ತಿಂದರೆ ಅಜೀರ್ಣದಿಂದ ರೋಗಗಳು ಬರುವುದು. ಆದ್ದರಿಂದ ಇಂತಹ ಮಹತ್ವದ ಗಾದೆಯನ್ನು ಮಾಡಿದ್ದಾರೆ.

27. ಮಾತು ಬೆಳ್ಳಿ ಮೌನ ಬಂಗಾರ

ಕೆಲವು ಸಾರಿ ಮಾತಿನಿಂದ ಆಗದ ಕೆಲಸ ಮೌನದಿಂದ ಆಗುತ್ತದೆ. ಮೂರ್ಖರ ಸಂಗದಲ್ಲಿದ್ದಾಗ ಮೌನವಾಗಿರುವುದು ಬಹು ಉತ್ತಮ ಎಂದು ತಿಳಿದವರು ಹೇಳುತ್ತಾರೆ. ಬಹಳ ತಿಳಿದವರಿದ್ದಾಗಲೂ ನಾವು ತಪ್ಪು ತಪ್ಪಾಗಿ ಮಾತನಾಡಿದರೆ ಅಪಹಾಸ್ಯಕ್ಕೀಡಾಗುತ್ತೇವೆ. ಆದುದರಿಂದಲೇ ನುಡಿದರೆ ಮುತ್ತಿನ ಹಾರದಂತಿರಬೇಕು ಎಂದು ಬಸವಣ್ಣನವರು ಹೇಳಿದ್ದಾರೆ. "ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು" ಎಂದೂ ಹೇಳುತ್ತಾರೆ.

28. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ

ಕಳೆದಕಾಲ, ಕೆಲಸಗಳಾವುದೂ ಹಿಂತಿರುಗಿ ಬರುವುದಿಲ್ಲ. ಆದ್ದರಿಂದ ಅದಕ್ಕಾಗಿ ಕೊರಗದೇ ಚಿಂತಿಸದೇ ಮುಂದಿನ ಕೆಲಸ ಮಾಡುವುದು ಲೇಸೆಂದು ಈ ಗಾದೆಯ ನೀತಿ ಯಾವಾಗಲೂ ತಿಳಿದೋ ತಿಳಿಯದೆಯೋ ನಾವು ತಪ್ಪು ಕೆಲಸಗಳನ್ನು ಮಾಡುತ್ತಲೇ ಇರುತ್ತೇವೆ. ವ್ಯರ್ಥವಾದ ಕೆಲಸಗಳನ್ನು ಮಾಡಿ ನಂತರ ಪರಿತಪಿಸುತ್ತೇವೆ. ಒಡೆದು ಹೋದ ಹಾಲು ಹೇಗೆ ಮತ್ತೆ ಸರಿಯಾಗುವುದಿಲ್ಲವೋ ಹಾಗೆಯೇ ಕಾಲವನ್ನೂ ಮತ್ತೆ ತರಲು ಅಸಾಧ್ಯ ಅದಕ್ಕಾಗಿ ಚಿಂತಿಸದೇ ಮುಂದಿನ ಕೆಲಸಗಳನ್ನು ಜಾಗರೂಕರಾಗಿ ಮಾಡಬೇಕು ಎಂದು ಇದರ ಅರ್ಥ.

29. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ಬಹಳ ಹಿಂದಿನಿಂದಲೂ ಈ ಗಾದೆಯ ಮಹತ್ವ ಗೋಚರಿಸುತ್ತಾ ಬಂದಿದೆ, ಹಿಂದೆ ವಾಮನ ಪುಟ್ಟ ವಟುವಿನ ವೇಷದಿಂದ ಬಂದು ಇಡೀ ವಿಶ್ವವನ್ನೇ ಆಕ್ರಮಿಸಿದ ರೀತಿ ಎಲ್ಲರಿಗೂ ಗೊತ್ತು ಶ್ರೀಕೃಷ್ಣ ಮಗುವಾಗಿದ್ದಾಗಲೇ ಬಹಳ ಅಪಾಯಕಾರಿಯಾದ ರಾಕ್ಷಸರನ್ನು ಕೊಂದು ಪವಾಡಗಳನ್ನು ಮಾಡಿದ್ದಾನೆ. ಮಧುರವಾದ ಸುವಾಸನೆ ಬೀರುವ ವಸ್ತುಗಳಾದ ಏಲಕ್ಕಿ, ಲವಂಗ, ಮೆಣಸು ಮುಂತಾದವೆಲ್ಲಾ ಬಹು ಸಣ್ಣ ವಸ್ತುಗಳಾದರೂ ಅವು ತಮ್ಮ ಸುಗಂಧದಿಂದ ಎಲ್ಲರ ಮನ ಸೆಳೆಯುತ್ತವೆ. ಹಾಗೆಯೇ ಮನುಷ್ಯನು ದುರ್ಬಲನಾದರೂ ಸಹ ತನ್ನ ಉಪಯುಕ್ತವಾದ ಕೆಲಸಗಳಿಂದ ಲೋಕ ವಿಖ್ಯಾತನಾಗಬಹುದು.

30. ಶಕ್ತಿಗಿಂತ ಯುಕ್ತಿ ಮೇಲು

ಬಲವಾದ ಶರೀರ ಹೊಂದಿದ ಮಾತ್ರಕ್ಕೆ ಬುದ್ಧಿವಂತಿಕೆ ಇಲ್ಲದಿದ್ದರೆ, ಅವರು ಪ್ರಗತಿ ಹೊಂದಲು ಸಾಧ್ಯವಿಲ್ಲ. ಸಣ್ಣ, ಸಣ್ಣ ಪ್ರಾಣಿಗಳೂ ಸಹ ಯುಕ್ತಿಯಿಂದ ದೊಡ್ಡ ದೊಡ್ಡ, ಹಾಗೂ ಅಪಾಯಕಾರಿಗಳಾದ ಪ್ರಾಣಿಗಳೊಡನೆ ಹೋರಾಟ ನಡೆಸಿ ಜಯ

ಗಳಿಸಿದ ಸಾಕಷ್ಟು ಕತೆಗಳು ಪಂಚತಂತ್ರದಲ್ಲಿದೆ. ಕೆಲವು ಸಣ್ಣ ರಾಷ್ಟ್ರಗಳೂ ಸಹ ಅವುಗಳಿಗಿಂತ ಎಷ್ಟೋಪಾಲು ದೊಡ್ಡ ರಾಷ್ಟ್ರಗಳೊಡನೆ ಬುದ್ಧಿವಂತಿಕೆಯಿಂದ ಪೈಪೋಟಿ ನಡೆಸಿವೆ. ಶಕ್ತಿಯಿಂದ ಸಾಧಿಸಲಾಗದ ಕೆಲಸವನ್ನು ಬುದ್ಧಿವಂತಿಕೆಯಿಂದ ಸಾಧಿಸಬಹುದೆಂಬ ಹಿತನುಡಿ ಈ ಗಾದೆಯಲ್ಲಿದೆ.

31. ಸಜ್ಜನರ ಸಂಗ ಹೆಜ್ಜೇನು ಸವಿದಂತೆ

" ಸಗಣಿಯುವನೊಡನೆ ಸರಸಕ್ಕಿಂತ ಗಂಧದವನೊಡನೆ ಗುದ್ದಾಟ ಮೇಲು " ಎಂದೂ ಸಹ ಒಂದು ಗಾದೆಯಿದೆ. ಸಜ್ಜನರ ಒಡನಾಟವೇ ಸುಖ ತರುವಂತಹುದು. ಅವರೊಡನೆ ಮಾತನಾಡುತ್ತಿದ್ದರೆ ಅನೇಕ ವಿಷಯಗಳು ತಿಳಿಯುತ್ತವೆ. ಕೀಳು ಮನೋಭಾವನೆಗಳು ಹತ್ತಿರ ಸುಳಿಯುವುದಿಲ್ಲ. ಅದನ್ನು ಹೆಜ್ಜೇನಿಗೆ ಹೋಲಿಸಲಾಗಿದೆ ಹೆಜ್ಜೇನು ಬಹು ಸವಿಯಾದದ್ದು, ಸಜ್ಜನರ ಸಂಗವೂ ಹಾಗೆಯೇ. ಒಳ್ಳೆಯ ವಿದ್ಯಾರ್ಥಿಗಳ ಗೆಳೆತನದಿಂದ ಗೆಳೆತನ ಮಾಡಿದವರು ಉನ್ನತಿ ಹೊಂದುತ್ತಾರೆ. ಕೆಟ್ಟ ಹವ್ಯಾಸಿಗಳ ಗೆಳೆತನ ಮಾಡಿದವರು ಹಾಳಾಗುತ್ತಾರೆ. ಸ್ನೇಹಿತರನ್ನು ನೋಡಿಯೇ ಒಬ್ಬ ವ್ಯಕ್ತಿಯ ಸ್ಥಾನವನ್ನು ಅಳೆಯುತ್ತಾರೆ.

32. ಹಾಸಿಗೆ ಇದ್ದಷ್ಟು ಕಾಲು ಚಾಚು

ಮಿತವಾದದ್ದು ಹಿತವಾಗಿರುತ್ತದೆ. ನಮ್ಮ ಜೀವನದ ಎಲ್ಲ ಸಂದರ್ಭಗಳಿಗೂ ಇದು ಅನ್ವಯಿಸುತ್ತದೆ. ಈ ಗಾದೆಯು ಸಾಮಾನ್ಯ ಜನರಲ್ಲಿ ಬಹುವಾಗಿ ಬಳಕೆಯಲ್ಲಿದೆ. ನಮ್ಮ ಶಕ್ತಿಗೆ ಮೀರಿ ಖರ್ಚು ಮಾಡಿದರೆ ತೊಂದರೆಗೊಳಗಾಗಬೇಕಾಗುತ್ತದೆ. ಹಾಸಿಗೆಗಿಂತ ಕಾಲು ಉದ್ದವಾದರೆ ಕಾಲು ನೆಲದ ಮೇಲಿರಬೇಕಾಗುವುದು. ಅದರಿಂದ ಹಲವು ರೀತಿಯ ತೊಂದರೆಗಳಾಗಬಹುದೆಂದು ತಿಳಿದಿದ್ದರಿಂದ ಅದರ ಉದಾಹರಣೆಯನ್ನೇ ಮುಂದು ಮೆಚ್ಚಕ್ಕೆ ಕೊಟ್ಟಿದ್ದಾರೆ. ಆದಾಯಕ್ಕಿಂತ ಹೆಚ್ಚು ವ್ಯಯ ಮಾಡಿದರೆ ಅದರಿಂದ ಸಾಲ ಮಾಡಬೇಕಾಗಿ ಬರುವುದು. ಆ ಸಾಲ ತೀರಿಸಲು ಮತ್ತೆ ಸಾಲ ಮಾಡಬೇಕಾಗಿ ಬರುವುದು. ಆ ಸಾಲ ತೀರಿಸಲು ಮತ್ತೆ ಸಾಲ ಹೀಗೆ ಸಾಲದ ವಿಷ ವರ್ತುಲದಲ್ಲಿ ಸಿಲುಕಿದ ವ್ಯಕ್ತಿ ನರಳುತ್ತಾನೆ. ಹಾಗಾಗದಿರಲೆಂದೇ ಈ ಎಚ್ಚರಿಕೆಯ ನುಡಿ.

33. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ

ಒಣ ಆಡಂಬರ, ಥಳುಕುಗಳನ್ನೇ ಮೋಹಿಸುವ ಜನಗಳನ್ನು ಕಂಡು ಈ ಗಾದೆ ಮಾಡಿದ್ದಾರೆ. ಸರಿಯಾಗಿ ದಿನವೂ ಊಟಕ್ಕೆ ಹಣದ ಅನುಕೂಲವಿಲ್ಲದಿದ್ದರೂ ದೇಹದ ಬಾಹ್ಯ ಅಲಂಕಾರಕ್ಕೆ ಹೆಚ್ಚು ಗಮನಕೊಡುತ್ತಾರೆ. ನೋಡಲು ಸುಂದರವಾಗಿಲ್ಲದಿದ್ದರೂ ಕೃತಕ ಅಲಂಕಾರದಿಂದಲೇ ಎಲ್ಲರೂ ತಮಗೆ ಗೌರವ ಕೊಡುತ್ತಾರೆಂದು ಭ್ರಮಿಸುತ್ತಾರೆ. ತೋಟ ಶೃಂಗಾರವಾಗಿ ಹೊರನೋಟಕ್ಕೆ ಕಾಣುವಂತೆ ಮಾಡಲು ಒಳಗೆ ಬರೀ

ಗೋಣಿಸೊಪ್ಪನ್ನು ಬೆಳೆಸಿ ಹಸಿರಾಗಿ ಕಾಣುವಂತೆ ಮಾಡುವ ದೃಷ್ಟಾಂತವನ್ನು ಇದಕ್ಕೆ ಕೊಡಬಹುದು.

34. ಹೊಸ ವೈದ್ಯನಿಗಿಂತ ಹಳೇ ರೋಗಿ ಮೇಲು

ಹೊಸದಾಗಿ ವೈದ್ಯಕೀಯ ಕಲಿತ ವೈದ್ಯನಿಗೆ ಅನುಭವದ ಕೊರತೆ ಇರುತ್ತದೆ. ಹಳೇ ರೋಗಿಯಾದರೆ ರೋಗ ಅನುಭವಿಸಿ ಬೇರೆ ಬೇರೆ ವೈದ್ಯರಿಂದ ಔಷಧಿ ತೆಗೆದುಕೊಂಡು ಸಾಕಷ್ಟು ಅನುಭವವಿರುತ್ತದೆ. ರೋಗದ ಲಕ್ಷಣಗಳು, ಅದರ ಪರಿಣಾಮ, ಔಷಧಿಗಳ ಉಪಯೋಗ ಹಾಗೂ ಅದರ ಒಳಿತು, ಕೆಡುಕುಗಳನ್ನು ಅನುಭವದಿಂದ ತಿಳಿದಿರುತ್ತಾರೆ. ಆದುದರಿಂದ ಹೊಸ ವೈದ್ಯನಿಗಿಂತಲೂ ಚೆನ್ನಾಗಿಯೇ ಅವರು ರೋಗಗಳ ಬಗೆಗಳನ್ನು ತಿಳಿಯುತ್ತಾರೆ. ಕೆಲವೊಮ್ಮೆ ಔಷಧಿ ಸೂಚಿಸುವುದರಲ್ಲೂ ನೆರವಾಗುತ್ತಾರೆ.

35. ಆರೋಗ್ಯವೇ ಭಾಗ್ಯ

ಆಂಗ್ಲ ಭಾಷೆಯ ಒಂದು ಗಾದೆ ಹಣ ಕಳೆದರೆ ಮತ್ತೆ ಕೂಡಿಸಬಹುದು, ಆರೋಗ್ಯ ಕೆಟ್ಟರೆ ಅದನ್ನು ಗಳಿಸುವುದು ಕಷ್ಟ ಎಂದು ಆರೋಗ್ಯದ ಮಹತ್ವವನ್ನು ಹೇಳುತ್ತದೆ ಎಲ್ಲಾ ಅನುಕೂಲಗಳಿದ್ದರೂ ಆರೋಗ್ಯವಿಲ್ಲದಿದ್ದರೆ ಯಾವ ಸುಖವನ್ನೂ ಅನುಭವಿಸಲಾಗುವುದಿಲ್ಲ. ಆರೋಗ್ಯವೊಂದಿದ್ದರೆ ಬಡತನದಲ್ಲಿಯೂ ಸುಖಕಾಣಬಹುದು. ಬಾಲ್ಯದಲ್ಲಿ ಹಿರಿಯರಿಂದ ಪೋಷಿಸಲ್ಪಟ್ಟ ಆರೋಗ್ಯವನ್ನು ಯವ್ವನದಲ್ಲಿ ವ್ಯಾಯಾಮ ಮತ್ತು ಸಂಯಮ ನಿಷ್ಠೆಯಿಂದ ಕಾಪಾಡಿಕೊಂಡು, ರೂಢಿಸಿಕೊಂಡ ಆರೋಗ್ಯ ಮುಪ್ಪಿನಲ್ಲಿಯೂ ರೋಗರಹಿತವಾಗಿ ನೆಮ್ಮದಿಯ ಭಾಗ್ಯವನ್ನು ಕೊನೆಯತನಕ ಅನುಭವಿಸಬಹುದು.

36. ಕಣ್ಣರಿಯದಿದ್ದರೂ ಕರುಳರಿಯದೆ ?

ನಮ್ಮ ಬರಿಗಣ್ಣಿಗೆ ಕಾಣದ ಎಷ್ಟೋ ಸತ್ಯಗಳು ಮನಕ್ಕೆ ಗೋಚರವಾಗುವ ಬಹಳಷ್ಟು ಪ್ರಸಂಗಗಳು ನಮ್ಮ ಸುತ್ತಮುತ್ತ ನಡೆಯುತ್ತಲೇ ಇರುತ್ತವೆ. ನಮ್ಮೆಲ್ಲರ ದೇಹಗಳಲ್ಲಿ ಆರನೆಯ ಇಂದ್ರಿಯವೊಂದು ಕೆಲಸ ಮಾಡುತ್ತಲೇ ಇರುತ್ತದೆ ಎಂದು ವಿಜ್ಞಾನಿಗಳು ಸಂಶೋಧನೆ ಮಾಡಿದ್ದಾರೆ. ನಮ್ಮಿಂದ ಅರಿಯದೇ, ಮಾಡಿದ ಕೆಲವು ತಪ್ಪುಗಳು ಆದಾಗ ಅದನ್ನು ತಿದ್ದುಕೊಳ್ಳುವ ಅಥವಾ ಸರಿಪಡಿಸುವ ಮಾರ್ಗಗಳು ಮನಸ್ಸಿನ ಅಂತರಾಳದಿಂದ ಚಿಮ್ಮುತ್ತವೆ.

ಪುಟ 18

೧ (ಏಲಕ್ಕಿ)	೨ (ಕಿವಿ)
೩ ಅಡಿಕೆ. ಸಾಸಿವೆ, ಬೆಲ್ಲ, ಮೆಣಸು)	
೪ (ಈರುಳ್ಳಿ)	೫ (ಬಾಳೆಹಣ್ಣು)
೬ (ದೀಪದ ಹಣತೆ)	೭ (ಹಣೆ ಬೊಟ್ಟು)
೮ (ಈರುಳ್ಳಿ)	೯ (ಆಕಾಶ, ನಕ್ಷತ್ರ)
೧೦ (ಮೆಣಸಿನಕಾಯಿ)	೧೧ (ಚಪ್ಪಲಿ)
೧೨ (ಹುಣಸೆಹಣ್ಣು)	೧೩ (ನೀಳವಾದ ದಾರಿ)
೧೪ (ಖರ್ಜೂರ, ಬಾಳೆಹಣ್ಣು, ಕಲ್ಲುಸಕ್ಕರೆ)	
೧೫ (ಸುಣ್ಣ)	೧೬ (ಬೆಳ್ಳುಳ್ಳಿ)
೧೭ (ಮೂಗುತಿ)	೧೮ (ಹಲಸಿನತೊಳೆ, ಬೀಜ)
೧೯ (ದೀಪ)	೨೦ (ತೆಂಗಿನಕಾಯಿ)
೨೧ (ಸೂಜಿ, ದಾರ)	೨೨ (ಆಗಸ)
೨೩ (ಈರುಳ್ಳಿ)	೨೪ (ಹಲಸಿನಹಣ್ಣು)
೨೫ (ಬೀಸುವಕಲ್ಲು, ಹಿಟ್ಟು)	೨೬ (ತೆಂಗಿನಮರ. ಎಳನೀರು)
೨೭ (ಉಪ್ಪು)	೨೮ (ಮನುಷ್ಯ)
೨೯ (ಪೊರಕೆ)	೩೦ (ರಾಗಿಮುದ್ದೆ, ರಾಗಿ ರೊಟ್ಟಿ ರಾಗಿ ಶ್ಯಾವಿಗೆ
೩೧ (ತಾಯಿ, ಮಗು)	೩೨ (ವೀಳ್ಯದೆಲೆ, ಸುಣ್ಣ, ಅಡಿಕೆ)
೩೩ (ಒತ್ತು ಶಾವಿಗೆ)	೩೪ (ಕುಂಬಳ ಬಳ್ಳಿ, ಕುಂಬಳಕಾಯಿ)
೩೫ (ನವಿಲು)	೩೬ (ಮಲ್ಲಿಗೆ ಗಿಡ, ಹೂ)
೩೭ (ದೀಪದ ಬೆಳಕು)	

ಭಾಷಾ ವಾಹಿನೀ ಸರಣಿಯ ಈ ಕಿರುಹೊತ್ತಿಗೆಯಲ್ಲಿ ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ತತ್ಸಮ ತದ್ಭವ ಗಳು, ಸಮಾನಾಂತರ ಪದಗಳು, ವಿರುದ್ಧ ಪದಗಳು ಮತ್ತು ಇತರ ಉಪಯುಕ್ತ ವಿಷಯಗಳ ಸಂಗ್ರಹವನ್ನು ವಿದ್ಯಾರ್ಥಿ ವೃಂದಕ್ಕೆ ಮಾತ್ರ ಅವರ ಶಾಲಾ ಪರೀಕ್ಷೆಗಳಿಗೆ ಉಪಯೋಗ ವಾಗುವಂತೆ ಸೀಮಿತ ವಿಸ್ತಾರಗಳೊಂದಿಗೆ ನಿರೂಪಿಸಿ ನಿಯೋಜಿ ಸಲಾಗಿದೆ.

ಜನವರಿ 2000

ವಿತರಣೆ :

ಅಪರ್ಣಾ ಪುಸ್ತಕಗಳು ಮತ್ತು ಪತ್ರಿಕೆಗಳು

3, ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ ಸಂಕೀರ್ಣ

ಕಾಳಿದಾಸ ರಸ್ತೆ, ಮೈಸೂರು-570 002

ಬೆಲೆ : 15 ರೂ.